# ಕರ್ನಾಟಕ ಸರ್ಕಾರ

ರಾಜ್ಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಡಾ|| ಬಿ. ಆರ್. ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ಕವಿ ರನ್ನ, ಗಾಂಧಿತತ್ವ, ಶ್ರೀ ನಾರಾಯಣ ಗುರು, ಪ್ರತಿಭಾನ್ವಿತ ಬಾಲಕಿಯರ, ಶ್ರೀಮತಿ ರಮಾಬಾಯಿ ಅಂಬೇಡ್ಕರ್, ಶ್ರೀಮತಿ ಸಾವಿತ್ರಿ ಬಾಯಿ ಪುಲೆ, ಮಾಹಾತ್ಮ ಜ್ಯೋತಿ ಬಾ ಪುಲೆ, ಸಂತ ಸೇವಾಲಾಲ್ ಮತ್ತು ಡಿ.ದೇವರಾಜ ಅರಸು ಮಹನೀಯರ ಹೆಸರಿನ ವಸತಿ ಶಾಲೆಗಳ 2026-27ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ, ಪ್ರವೇಶ ಪರೀಕ್ಷೆ ಮತ್ತು ದಾಖಲಾತಿಯ ಮಾರ್ಗಸೂಚಿಗಳು.


ಕರ್ನಾಟಕ ಪರೀಕ್ಷಾ ಪ್ರಾಧಿಕಾರ

18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,

ಬೆಂಗಳೂರು – 560012

ಇ-ಮೇಲ್ ವಿಳಾಸ : keauthority-ka@nic.in

ವೆಬ್ ಸೈಟ್ ವಿಳಾಸ : **https://cetonline.karnataka.gov.in**

ಸಹಾಯವಾಣಿ: 080–23460460 (5 ಲೈನ್‌ಗಳು) (ಬೆಳಗ್ಗೆ: 9:30 ರಿಂದ ಸಂಜೆ: 6.00 ರ ವರೆಗೆ)


## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ).

ಇ – ಮಾಹಿತಿ ಪುಸ್ತಕ


ನಂ.8, ಎಂ.ಎಸ್.ಬಿ. 1 ರ 6 ಮತ್ತು 7ನೇ ಮಹಡಿ, ಎಂ.ಎಸ್.ಬಿ. 3 ರ 2ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು – 560052.

ದೂರವಾಣಿ ಸಂಖ್ಯೆ : 080–48353758, 44324292

ಟೆಲಿಫ್ಯಾಕ್ಸ್ 080 -22262288 ಇ-ಮೇಲ್ ವಿಳಾಸ : ed.kreis@ka.gov.in

ವೆಬ್ ಸೈಟ್ ವಿಳಾಸ :https://kreis.karnataka.gov.in

# ಸಂಕ್ಷಿಪ್ತ ಮಾಹಿತಿ

1. ಅಭ್ಯರ್ಥಿಯು ರಾಜ್ಯದಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಯಾವುದೇ ವಸತಿ ಶಾಲೆ/ಕಾಲೇಜಿನಿಂದ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು ಮೊದಲು ತನ್ನ SATS ಸಂಖ್ಯೆಯನ್ನು ತಾನು ಓದುತ್ತಿರುವ ಶಾಲೆಯಿಂದ ಪಡೆದು, ನಂತರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಯಾವುದೇ ವಸತಿ ಶಾಲೆ/ಕಾಲೇಜಿನ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಅರ್ಜಿಯನ್ನು ತುಂಬಲು ಅಭ್ಯರ್ಥಿಯು ಪ್ರಾಧಿಕಾರದ ವೆಬ್‌ಸೈಟ್ ಲಿಂಕ್ **https://cetonline.karnataka.gov.in/kea/** ನಲ್ಲಿ https://kreis.karnataka.gov.in ಅನ್ನು ಆಯ್ಕೆ ಮಾಡಿಕೊಳ್ಳಬೇಕು.
4. ಅಭ್ಯರ್ಥಿಯು ತನ್ನ SATS ಸಂಖ್ಯೆಯನ್ನು ನಮೂದಿಸಬೇಕು, ನಂತರ ತನ್ನ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ನೋಡಲು ಅವಕಾಶವಿರುತ್ತದೆ.
5. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಲಿಂಗ ಇತ್ಯಾದಿ ವಿವರಗಳನ್ನು ನೋಡಬಹುದು. ಇವುಗಳಲ್ಲಿ ಏನಾದರೂ ವ್ಯತ್ಯಾಸವಿದ್ದಲ್ಲಿ ತಿದ್ದುಪಡಿ ಮಾಡಿಕೊಂಡು ನಂತರ ಅರ್ಜಿ ಸಲ್ಲಿಸಲು ಸೂಚಿಸಿದೆ.
6. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಅಭ್ಯರ್ಥಿಯನ್ನು ಸಾಮಾನ್ಯ ವರ್ಗದ ಅಭ್ಯರ್ಥಿ ಎಂದು ಪರಿಗಣಿಸಲಾಗುವುದು.
7. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪರೀಕ್ಷೆ ಮತ್ತು ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ರವಾನಿಸಬೇಕಾಗಿರುವುದರಿಂದ ಪೋಷಕರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
8. 2026–27ನೇ ಸಾಲಿಗೆ ವಸತಿ ಶಾಲೆಗಳ 6ನೇ ತರಗತಿಗೆ ಲಭ್ಯವಿರುವ ಒಟ್ಟು 43,070 ಸ್ಥಾನಗಳಲ್ಲಿ ಶೇ.50 ಸ್ಥಾನಗಳನ್ನು ಅಂದರೆ 21,535 ಸ್ಥಾನಗಳನ್ನು **ಪ್ರವೇಶ ಪರೀಕ್ಷೆ ಮೂಲಕ** ಹಂಚಿಕೆ ಮಾಡಲಾಗುವುದು.
9. **ವಸತಿ ಶಾಲೆಗಳ ಆಯ್ಕೆಯನ್ನು ಆದ್ಯತಾ ಕ್ರಮದಲ್ಲಿ ನಮೂದಿಸುವ ಕುರಿತು** – ವಸತಿ ಶಾಲೆ/ಕಾಲೇಜುಗಳ ಮೂಲಕ ಆನ್-ಲೈನ್‌ನಲ್ಲಿ ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾರೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆಯಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ಸ್ಥಾನಗಳನ್ನು ಹಾಗೂ ಶೇ.25 ಸ್ಥಾನಗಳನ್ನು ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು. ಆದುದರಿಂದ ಅಭ್ಯರ್ಥಿಗಳು ತಮ್ಮ ಸೀಟು ಹಂಚಿಕೆ ಅವಕಾಶವನ್ನು ಹೆಚ್ಚಿಸಿಕೊಳ್ಳಲು ತಮ್ಮ ತಾಲ್ಲೂಕು/ಜಿಲ್ಲೆಯಲ್ಲಿರುವ KREIS ನ ಎಲ್ಲಾ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸತಕ್ಕದ್ದು. **ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ವಸತಿ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ Computerised Auto Selection ಮೂಲಕ ಸೀಟು ಹಂಚಿಕೆಯನ್ನು ಮಾಡಲಾಗುವುದು**.

**ಪೋಷಕರ ಗಮನಕ್ಕೆ:** ಅಭ್ಯರ್ಥಿಗಳ ಪೋಷಕರು ಮೇಲ್ಕಂಡ ಅಂಶಗಳನ್ನು ಗಮನಿಸಿ, ತಮ್ಮ ತಾಲ್ಲೂಕು/ ಜಿಲ್ಲೆಯಲ್ಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಶಾಲೆಗಳ ವಿವರಗಳನ್ನು ಪಡೆದುಕೊಂಡು, ತಮ್ಮ ಮೀಸಲಾತಿಗೆ ಅನುಗುಣವಾಗಿ ಸೀಟುಗಳ ಲಭ್ಯತೆಯನ್ನು ಪರಿಗಣಿಸಿ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕು ಎಂಬುದನ್ನು ತೀರ್ಮಾನಿಸಿ, ಶಾಲೆಗಳ ಆಯ್ಕೆಯನ್ನು ಆದ್ಯತಾ ಕ್ರಮದಲ್ಲಿ ನಮೂದಿಸಬೇಕು. ಆದ್ದರಿಂದ ಶಾಲೆಗಳನ್ನು ದಾಖಲಿಸುವ ಮೊದಲು ಒಂದು ಹಾಳೆಯಲ್ಲಿ ಬರೆದುಕೊಂಡು ವಿಚಾರ ಮಾಡಿ ನಂತರ ನಮೂದಿಸುವುದು ಸೂಕ್ತ. ಅರ್ಜಿ ಸಲ್ಲಿಸಿದ ನಂತರ ಪೋಷಕರು ತಮ್ಮ ಮಗುವಿನ ಎಲ್ಲಾ ವಿವರಗಳು ಸರಿಯಾಗಿ ನಮೂದಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಸ್ವೀಕೃತಿಯನ್ನು ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರಿಂದ ಪಡೆಯತಕ್ಕದ್ದು. ತದನಂತರ ಯಾವುದೇ ಕಾರಣಕ್ಕೂ ತಿದ್ದುಪಡಿ ಮಾಡಲು ಮತ್ತೊಮ್ಮೆ ಅವಕಾಶ ನೀಡಲಾಗುವುದಿಲ್ಲ.

### ವಿಶೇಷ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೆ ಮೀಸಲಾತಿಯನ್ವಯ ನೇರ ದಾಖಲಾತಿಗೆ ಅವಕಾಶ:

2026-27ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿಗೆ ಲಭ್ಯವಿರುವ ಒಟ್ಟು 43,070 ಸ್ಥಾನಗಳಲ್ಲಿ ಶೇ.50 ಸ್ಥಾನಗಳನ್ನು ಅಂದರೆ 21,535 ಸ್ಥಾನಗಳನ್ನು ವಿಶೇಷ ವರ್ಗಗಳ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೇ ಮೀಸಲಾತಿ ಅನ್ವಯ **ನೇರ ದಾಖಲಾತಿ** ಅವಕಾಶವನ್ನು ಕಲ್ಪಿಸಲಾಗಿ . ಹೆಚ್ಚಿನ ವಿವರಗಳನ್ನು ಪ್ರತ್ಯೇಕ ಲಿಂಕ್ ಮೂಲಕ ನೀಡಲಾಗುವುದು. ವಿಶೇಷ ವರ್ಗಗಳಿಗೆ ಸೇರಿದವರಾಗಿದ್ದಲ್ಲಿ, ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ದಾಖಲೆಗಳನ್ನು ಹೊಂದುವುದು ಕಡ್ಡಾಯವಾಗಿದ್ದು, ಪ್ರವೇಶಾತಿ ಸಮಯದಲ್ಲಿ ಶಾಲೆಯ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.

## PART - A


| ಕ್ರ. ಸಂ. | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| | **PART - A** | |
| 1 | ಪೀಠಿಕೆ | 4 |
| 2 | ವಸತಿ ಶಾಲೆಗಳ 2026-27ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪರೀಕ್ಷೆ ಹಾಗೂ ಇತರ ಕಾರ್ಯಕ್ರಮಗಳ ವೇಳಾಪಟ್ಟಿಯ ವಿವರಗಳು | 4 |
| 3 | ಲಭ್ಯವಿರುವ ಸ್ಥಾನಗಳ ಸಂಖ್ಯೆ | 5 |
| 4 | ವರ್ಗವಾರು ಸ್ಥಾನ ಹಂಚಿಕೆ | 6-7 |
| 5 | ಸ್ಥಳೀಯ ಅಭ್ಯರ್ಥಿ | 7 |
| 6 | ಜಾತಿ ಮತ್ತು ಆದಾಯ ಪ್ರಮಾಣ ಪತ್ರ | 8 |
| 7 | ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು | 8 |
| 8 | ಪ್ರವೇಶ ಪರೀಕ್ಷೆಗೆ ವಸತಿ ಶಾಲೆಗಳ ಮೂಲಕ ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಸ್ವಂತ ಜಿಲ್ಲೆಯಲ್ಲಿರುವ ವಸತಿ ಶಾಲೆಗಳ ಆಯ್ಕೆಗೆ ಆದ್ಯತೆ ದಾಖಲಿಸುವ ವಿಧಾನ | 8-10 |
| 9 | ಪ್ರವೇಶ ಪರೀಕ್ಷೆ ವಿಧಾನ | 10 |
| 10 | ಲಿಖಿತ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ | 10-14 |
| 11 | ಸಮಾನ ಅಂಕಗಳು ಬಂದಾಗ ಮೆರಿಟ್ ನಿರ್ಣಯ | 14 |
| 12 | ಫಲಿತಾಂಶ ಪ್ರಕಟಣೆ | 15 |
| 13 | ಸೀಟು ಹಂಚಿಕೆ ಮತ್ತು ದಾಖಲಾತಿ ವಿಧಾನ | 15-16 |
| 14 | ಲಿಂಗ ಹಾಗೂ ವರ್ಗವಾರು ಖಾಲಿ ಉಳಿದ ಸ್ಥಾನಗಳ ಭರ್ತಿ | 16 |
| | **PART- B** | |
| 1 | ಪೀಠಿಕೆ | 17 |
| 2 | ವಿಶೇಷ ವರ್ಗದ ಅಭ್ಯರ್ಥಿಗಳಿಗೆ ಲಭ್ಯವಿರುವ ಸ್ಥಾನಗಳ ಸಂಖ್ಯೆ | 17 |
| 3 | ವಿಶೇಷ ವರ್ಗಗಳ ಅರ್ಥ | 18-20 |
| 4 | ಸ್ಥಳೀಯ ಅಭ್ಯರ್ಥಿ | 20 |
| 5 | ಜಾತಿ ಮತ್ತು ಆದಾಯ ಪ್ರಮಾಣ ಪತ್ರ | 20 |
| 6 | ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು | 21 |
| | **ವಿಶೇಷ ಸೂಚನೆ :** | 21 |

## 1. ಪೀಠಿಕೆ:–

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವತಿಯಿಂದ 847 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಡಾ|| ಬಿ ಆರ್ ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ಕವಿ ರನ್ನ, ಗಾಂಧಿತತ್ವ, ಶ್ರೀ ನಾರಾಯಣ ಗುರು, ಪ್ರತಿಭಾನ್ವಿತ ಬಾಲಕಿಯರ, ಶ್ರೀಮತಿ ರಮಾಬಾಯಿ ಅಂಬೇಡ್ಕರ್, ಶ್ರೀಮತಿ ಸಾವಿತ್ರಿ ಬಾಯಿ ಪುಲೆ, ಮಾಹಾತ್ಮ ಜ್ಯೋತಿ ಬಾ ಪುಲೆ, ಸಂತ ಸೇವಾಲಾಲ್ ಮತ್ತು ಡಿ.ದೇವರಾಜ ಅರಸು ಮಹನೀಯರ ಹೆಸರಿನ ವಸತಿ ಶಾಲೆಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಡೆಸಲಾಗುತ್ತಿದೆ. ಈ ಎಲ್ಲಾ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ ಲಭ್ಯವಿರುವ **ಒಟ್ಟು 43,070 ಸೀಟುಗಳಲ್ಲಿ ಶೇ 50 ರಷ್ಟು ಅಂದರೆ 21,535 ಸೀಟುಗಳನ್ನು ಪ್ರವೇಶ ಪರೀಕ್ಷೆ ನಡೆಸಿ, ಆನ್-ಲೈನ್ ಪ್ರಕ್ರಿಯೆ ಮುಖಾಂತರ ವಿದ್ಯಾರ್ಥಿಗಳನ್ನು ಭರ್ತಿ ಮಾಡಲು** ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕೋರಲಾಗಿದೆ.

ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ರಾಜ್ಯಾದ್ಯಂತ ಏಕಕಾಲದಲ್ಲಿ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು ಹಾಗೂ ಸದರಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ರಾಜ್ಯಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಅನ್ವಯಿಸುವ ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ ಆಯಾ ಜಿಲ್ಲಾ ವ್ಯಾಪ್ತಿಯ ಶಾಲೆಗಳಿಗೆ Computerised Auto Selection ಮೂಲಕ ಸೀಟು ಹಂಚಿಕೆ ಮಾಡಲಾಗುವುದು.

## 2. 2026-27 ನೇ ಶೈಕ್ಷಣಿಕ ಸಾಲಿನ ವಸತಿ ಶಾಲೆಗಳ 6 ನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ ಸಂ | ವಿವರ | ದಿನಾಂಕ |
|---|---|---|
| 01 | ಅಧಿಸೂಚನೆಯನ್ನು ದಿನಪತ್ರಿಕೆಗಳಲ್ಲಿ ಮತ್ತು ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ಪ್ರಕಟಿಸುವ ದಿನಾಂಕ | ದಿನಾಂಕ: 09.01.2026 |
| 02 | ಮಾಹಿತಿ ಪುಸ್ತಕವನ್ನು ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ಪ್ರಕಟಿಸುವ ದಿನಾಂಕ | ದಿನಾಂಕ: 13.01.2026 |
| 03 | ಘೋಷಣಾ ಪತ್ರವನ್ನು ಪ್ರಾಧಿಕಾರದ ವೆಬ್ ಸೈಟ್ ನಿಂದ Download ಮಾಡಿಕೊಂಡು ಭರ್ತಿ ಮಾಡಿ ವಸತಿ ಶಾಲೆಗಳಿಗೆ ಸಲ್ಲಿಸುವ ದಿನಾಂಕ | ದಿನಾಂಕ: 10.01.2026 ರಿಂದ ದಿನಾಂಕ: 25.01.2026 ವರೆಗೆ |
| 04 | ON LINE ಮುಖಾಂತರ ಹತ್ತಿರದ ವಸತಿ ಶಾಲೆ/ ಕಾಲೇಜುಗಳ ಮೂಲಕ ಅರ್ಜಿ ಸಲ್ಲಿಸುವುದು | ದಿನಾಂಕ: 19.01.2026 ರಿಂದ ದಿನಾಂಕ: 02.02.2026 ವರೆಗೆ |
| 05 | ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು (HALL TICKET) ಅರ್ಜಿ ಸಲ್ಲಿಸಿದ ವಸತಿ ಶಾಲೆ ಮತ್ತು ಕಾಲೇಜುಗಳಿಂದ ಪಡೆಯುವುದು (DOWNLOAD) | ದಿನಾಂಕ: 18.02.2026 |
| 06 | ಪ್ರವೇಶ ಪರೀಕ್ಷೆ-2026 | ದಿನಾಂಕ: 01.03.2026 |
| 07 | ಪ್ರವೇಶ ಪರೀಕ್ಷೆಯ ಫಲಿತಾಂಶ | ಮಾರ್ಚ್ ನಾಲ್ಕನೇ ವಾರ -2026 |
| 08 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಮೊದಲನೆ ಸುತ್ತಿನ ಸೀಟು ಹಂಚಿಕೆ | ಏಪ್ರಿಲ್ -2026 ರ ಒಂದನೇ ಮತ್ತು ಎರಡನೇ ವಾರ |
| 09 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆ | ಏಪ್ರಿಲ್ -2026 ರ ಮೂರನೇ ವಾರ ಮತ್ತು ನಾಲ್ಕನೇ ವಾರ |
| 10 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಮೂರನೇ ಸುತ್ತಿನ ಸೀಟು ಹಂಚಿಕೆ (ಅವಶ್ಯವಿದ್ದಲ್ಲಿ) | ಮೇ-2026, ಒಂದು ಮತ್ತು ಎರಡನೇ ವಾರ |

## 3. ಲಭ್ಯವಿರುವ ಸ್ಥಾನಗಳ ಸಂಖ್ಯೆ:

ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಡಾ|| ಬಿ.ಆರ್ ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ಕವಿ ರನ್ನ, ಗಾಂಧಿತತ್ವ, ಶ್ರೀ ನಾರಾಯಣ ಗುರು, ಪ್ರತಿಭಾನ್ವಿತ ಬಾಲಕಿಯರ, ಶ್ರೀಮತಿ ರಮಾಬಾಯಿ ಅಂಬೇಡ್ಕರ್, ಶ್ರೀಮತಿ ಸಾವಿತ್ರಿ ಬಾಯಿ ಫುಲೆ, ಮಾಹಾತ್ಮ ಜ್ಯೋತಿ ಬಾ ಫುಲೆ, ಸಂತ ಸೇವಾಲಾಲ್ ಮತ್ತು ಡಿ.ದೇವರಾಜ ಅರಸು ಮಹನೀಯರ ಹೆಸರಿನ ವಸತಿ ಶಾಲೆಗಳನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಲಭ್ಯವಿರುವ ಸ್ಥಾನಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಸತಿ ಶಾಲೆಯ ಮಾದರಿ | ಶಾಲೆಗಳ ಸಂಖ್ಯೆ | 6ನೇ ತರಗತಿಗೆ ಪ್ರತಿ ಶಾಲೆಗೆ ಮಂಜೂರಾತಿ ಸಂಖ್ಯೆ | ಲಭ್ಯವಿರುವ ಒಟ್ಟು ಸ್ಥಾನಗಳು | ಪ್ರವೇಶ ಪರೀಕ್ಷೆ ಮೂಲಕ ದಾಖಲಾತಿಗೆ ಲಭ್ಯವಿರುವ ಸ್ಥಾನಗಳು |
|---|---|---|---|---|---|
| **1** | ಮೊರಾರ್ಜಿ ದೇಸಾಯಿ ವಸತಿ ಶಾಲೆ | 364 | 50 | 18350 | **9175** |
| **2** | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 159 | 50 | 7990 | **3995** |
| **3** | ಡಾ|| ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ | 165 | 50 | 8270 | **4135** |
| **4** | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ | 98 | 50 | 4900 | **2450** |
| **5** | ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಸತಿ ಶಾಲೆ | 1 | 50 | 50 | **25** |
| **6** | ಅಲೆಮಾರಿ ವಸತಿ ಶಾಲೆ | 3 | 50 | 150 | **75** |
| **7** | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 1 | 50 | 50 | **25** |
| **8** | ಕವಿರನ್ನ ವಸತಿ ಶಾಲೆ | 1 | 50 | 50 | **25** |
| **9** | ಗಾಂಧಿತತ್ವ ವಸತಿ ಶಾಲೆ | 2 | 60 | 120 | **60** |
| **10** | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ | 24 | 50 | 1200 | **600** |
| **11** | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ದೇವನಹಳ್ಳಿ ವಸತಿ ಶಾಲೆಗೆ 50 ಸೀಟುಗಳು ಮಾತ್ರ ಮಂಜೂರಾಗಿದೆ.) | 16 | 80 | 1250 | **625** |
| **12** | ಶ್ರೀ ನಾರಾಯಣ ಗುರು ವಸತಿ ಶಾಲೆ | 4 | 50 | 200 | **100** |
| **13** | ಶ್ರೀ ಡಿ ದೇವರಾಜು ಅರಸು ವಸತಿ ಶಾಲೆ | 4 | 60 | 240 | **120** |
| **14** | ಶ್ರೀಮತಿ ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆ | 1 | 50 | 50 | **25** |
| **15** | ಶ್ರೀಮತಿ ಸಾವಿತ್ರಿ ಬಾಯಿ ಫುಲೆ ವಸತಿ ಶಾಲೆ | 1 | 50 | 50 | **25** |
| **16** | ಮಾಹಾತ್ಮ ಜ್ಯೋತಿ ಬಾ ಫುಲೆ ವಸತಿ ಶಾಲೆ | 2 | 50 | 100 | **50** |
| **17** | ಸಂತ ಸೇವಾಲಾಲ ವಸತಿ ಶಾಲೆ | 1 | 50 | 50 | **25** |
| **ಒಟ್ಟು** | | **847** | | **43070** | **21,535** |

**ವಿಶೇಷ ಸೂಚನೆ**: ಸರ್ಕಾರದ ಆದೇಶ ಸಂಖ್ಯೆ: ಸಕಇ –ಎಂ.ಡಿ.ಎಸ್/156/2023 ಬೆಂಗಳೂರು ದಿನಾಂಕ: 23.11.2023 ರಲ್ಲಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ 14 ವಸತಿ ಶಾಲೆಗಳಿಗೆ ತಲಾ 10 ರಂತೆ ಒಟ್ಟು 140 ಸೀಟುಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ –ಎಂ.ಡಿ.ಎಸ್/156/2023 ಬೆಂಗಳೂರು ದಿನಾಂಕ: 13.05.2025 ರಲ್ಲಿ ವಿಜಯನಗರ ಜಿಲ್ಲೆಯ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 03 ವಸತಿ ಶಾಲೆಗಳಿಗೆ ತಲಾ 10 ರಂತೆ ಒಟ್ಟು 30 ಸೀಟುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿ ಸರ್ಕಾರ ಆದೇಶ ಹೊರಡಿಸಿದ್ದು, ಅದರಂತೆ ಸೀಟು ಹಂಚಿಕೆ ಮಾಡಲಾಗುವುದು.

**6ನೇ ತರಗತಿಗೆ ಲಭ್ಯವಿರುವ ಒಟ್ಟು ಸೀಟುಗಳ ಪೈಕಿ 21,535 (ಶೇ.50) ಸೀಟುಗಳನ್ನು ಪ್ರವೇಶ ಪರೀಕ್ಷೆ ಮೂಲಕ ಹಂಚಿಕೆ ಮಾಡಲಾಗುವುದು ಹಾಗೂ ವಿಶೇಷ ವರ್ಗದ ಮಕ್ಕಳಿಗೆ ಲಭ್ಯವಿರುವ 21,535 (ಶೇ.50) ರಷ್ಟು ಸೀಟುಗಳನ್ನು ಮೀಸಲಾತಿಯನ್ವಯ ನೇರ ಪ್ರವೇಶಾತಿ ಮೂಲಕ ದಾಖಲಾತಿ ನೀಡಲಾಗುವುದು.**

## 4. <u>ವರ್ಗವಾರು ಸ್ಥಾನ ಹಂಚಿಕೆ</u>:

**ವರ್ಗವಾರು ಪ್ರವೇಶ ಸಂಖ್ಯೆ**:- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗದ ವಸತಿ ಶಾಲೆಗಳಿಗೆ ಮಂಜೂರಾದ ಸ್ಥಾನಗಳ ಸಂಖ್ಯೆಯ ಆಧಾರದ ಮೇಲೆ ಹಂಚಿಕೆಯಾದ ಸ್ಥಾನಗಳ ವಿವರ:

| ಕ್ರ ಸಂ | ವಸತಿ ಶಾಲೆ | ಪ.ಜಾತಿ | ಪ.ಪಂಗಡ | ಹಿಂ.ವರ್ಗ | ಸಾಮಾನ್ಯ | ಒಟ್ಟು |
|---|---|---|---|---|---|---|
| 1 | ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಒದಗಿಸುವ ಪರಿಶಿಷ್ಟ ಜಾತಿಯ ವಸತಿ ಶಾಲೆಗಳು. | 38 | 05 | 07 | 0 | **50** |
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುದಾನ ಒದಗಿಸುವ ಪ.ಪಂಗಡದ ವಸತಿ ಶಾಲೆಗಳು | 05 | 38 | 07 | 0 | **50** |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅನುದಾನ ಒದಗಿಸುವ ವಸತಿ ಶಾಲೆಗಳು | 07 | 05 | 38 | 0 | **50** |
| 4 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆಗಳು (ಸಾಮಾನ್ಯ) | 08 | 05 | 12 | 25 | **50** |
| 5 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಜಾತಿ) | 60 | 08 | 12 | 0 | **80** |
| 6 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಪಂಗಡ) | 08 | 60 | 12 | 0 | **80** |
| 7 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಹಿಂ.ವರ್ಗ) | 12 | 08 | 60 | 0 | **80** |
| 8 | ಡಿ. ದೇವರಾಜ ಅರಸು ವಸತಿ ಶಾಲೆ | 00 | 00 | 60 | 00 | **60** |
| 9 | ಹಿಂದುಳಿದ ವರ್ಗಗಳ ಅಲೆಮಾರಿ ವರ್ಗಗಳ ವಸತಿ ಶಾಲೆಗಳು | 00 | 00 | 50 | 00 | **50** |

- ❖ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಘೋಷಿಸಲಾಗಿರುವ 1) ಮೊರಾರ್ಜಿ ದೇಸಾಯಿ ವಸತಿ ಶಾಲೆ( BC-36), ಹನುಮಂತ ದೇವರ ಕಣಿವೆ, ಚಿತ್ರದುರ್ಗ 2) ಮೊರಾರ್ಜಿ ದೇಸಾಯಿ ವಸತಿ ಶಾಲೆ( BC-168 ), ಹಳೇಬಿಡು, ಹಾಸನ ಜಿಲ್ಲೆ 3) ಮೊರಾರ್ಜಿ ದೇಸಾಯಿ ವಸತಿ ಶಾಲೆ( BC-343 ), ಜೋಳದರಾಶಿ, ಬಳ್ಳಾರಿ ಜಿಲ್ಲೆ ಈ ಮೂರು ವಸತಿ ಶಾಲೆಗಳಿಗೆ ಪ್ರತಿ ತರಗತಿಗೆ ತಲಾ 50 ವಿದ್ಯಾರ್ಥಿಗಳ ಸಂಖ್ಯಾಬಲದಂತೆ ಒಟ್ಟು 150 ಸೀಟುಗಳನ್ನು ಹಿಂದುಳಿದ ವರ್ಗಗಳ ಅಲೆಮಾರಿ-ಅರೆಅಲೆಮಾರಿ ಅಭ್ಯರ್ಥಿಗಳಿಗೆ ಮಾತ್ರ ಸೀಟುಗಳನ್ನು ಹಂಚಿಕೆ ಮಾಡಲಾಗುವುದು.
- ❖ 2025-26ನೇ ಸಾಲಿನಲ್ಲಿ 4 ಕಂದಾಯ ವಿಭಾಗಗಳಿಗೆ ತಲಾ ಒಂದರಂತೆ ಮಂಜೂರಾದ ಡಿ.ದೇವರಾಜ ಅರಸು ರವರ ಹೆಸರಿನಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಜನಾಂಗದ ಅಭ್ಯರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ 4 ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿ ತರಗತಿಗೆ 60 ವಿದ್ಯಾರ್ಥಿಗಳ ಸಂಖ್ಯಾಬಲದಂತೆ ಒಟ್ಟು 240 ಹೆಚ್ಚಿನ ಸೀಟುಗಳನ್ನು ನೀಡಿ ಅವಕಾಶ ಕಲ್ಪಿಸಿದೆ. ವಸತಿ ಶಾಲೆಗಳು ಕ್ರಮವಾಗಿ 1. ಬೆಂಗಳೂರು ವಿಭಾಗದ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಭೂವನಹಳ್ಳಿ 2. ಮೈಸೂರು ವಿಭಾಗದ, ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ಹದಿನಾರು 3. ಬೆಳಗಾವಿ ವಿಭಾಗದ, ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕಿನ ಬಿಳಕುಂದಿ 4. ಕಲ್ಬುರ್ಗಿ ವಿಭಾಗದ, ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಕಾರಟಗಿ ಈ ರೀತಿಯಾಗಿ ಒಟ್ಟಾರೆಯಾಗಿ 4 ವಸತಿ ಶಾಲೆಗಳಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ವರ್ಗದ ಅಭ್ಯರ್ಥಿಗಳಿಗೆ ಶೇಕಡ 100 ರಷ್ಟು ಅಂದರೆ 240 ಸೀಟುಗಳನ್ನು ಮೀಸಲಿರಿಸಿ, **ವಿಭಾಗವನ್ನು ಘಟಕವನ್ನಾಗಿ ಪರಿಗಣಿಸಿ** ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.
- ❖ ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ 24 ವಸತಿ ಶಾಲೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶೇ. 50 ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡಲಾಗುವುದು. ಸಾಮಾನ್ಯ ವರ್ಗದ ಸ್ಥಾನಗಳಿಗೆ ಆದಾಯ ಪರಿಮಿತಿ ಇಲ್ಲದೆ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

5. **ಸ್ಥಳೀಯ ಅಭ್ಯರ್ಥಿ :** ರಾಜ್ಯದ ಎಲ್ಲಾ ತಾಲ್ಲೂಕಿನ **ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಸ್ಥಾನಗಳನ್ನು** ಅದೇ ಜಿಲ್ಲೆಯ ಇತರೆ ತಾಲ್ಲೂಕಿನ **ಅಭ್ಯರ್ಥಿಗಳಿಗೆ ಶೇ.25 ರಷ್ಟು ಸ್ಥಾನಗಳನ್ನು** ಹಂಚಿಕೆ ಮಾಡಲಾಗುವುದು. 50 ಸಂಖ್ಯಾಬಲದ ವಸತಿ ಶಾಲೆಗೆ 38 ಸ್ಥಾನಗಳನ್ನು, 60 ಸಂಖ್ಯಾಬಲದ ವಸತಿ ಶಾಲೆಗೆ 45 ಸ್ಥಾನಗಳು ಹಾಗೂ 80 ಸಂಖ್ಯಾಬಲದ ವಸತಿ ಶಾಲೆಗೆ 60 ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗೆ ಮೀಸಲಿಡಲಾಗುವುದು. ಒಂದು ತಾಲ್ಲೂಕಿಗೆ ನಿಗದಿಪಡಿಸಿದ ಸಂಖ್ಯೆಯ "ಸ್ಥಳೀಯ ಅಭ್ಯರ್ಥಿ"ಗಳು ದೊರೆಯದಿದ್ದರೆ, ಜಿಲ್ಲಾಮಟ್ಟದ ಕೌನ್ಸಿಲಿಂಗ್ ಮೂಲಕ ಖಾಲಿ ಸ್ಥಾನಗಳನ್ನು ಭರ್ತಿಮಾಡಲಾಗುವುದು. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು SATS ನಲ್ಲಿ ಲಭ್ಯವಿರುವ ಸ್ಥಳೀಯ ಅಭ್ಯರ್ಥಿ ಮಾಹಿತಿ ಅಥವಾ ಆಧಾರ್ ಕಾರ್ಡ್ ಅಥವಾ ಜಾತಿ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಅಥವಾ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು.

## 6. ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

| ವರ್ಗ | ಜಾತಿ | ಆದಾಯ |
|---|---|---|
| ಹಿಂದುಳಿದ ವರ್ಗ | ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ❖ ಹಿಂದುಳಿದ ವರ್ಗಕ್ಕೆ ಸೇರಿದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1,00,000/- ಮಿತಿಯೊಳಗಿರಬೇಕು.<br>❖ ಪ್ರ.ವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ರೂ.2,50,000/- ಆದಾಯ ಮಿತಿಯೊಳಗಿರಬೇಕು. |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2,50,000/- ಮಿತಿಯೊಳಗಿರತಕ್ಕದ್ದು. |

(ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 ಬೆಂಗಳೂರು, ದಿನಾಂಕ: 25.08.2025 ರ ಆದೇಶದಂತೆ ಪರಿಶಿಷ್ಟ ಜಾತಿಯ ಪ್ರ.ವರ್ಗ-ಎ(ಶೇ.6), ಪ್ರ.ವರ್ಗ-ಬಿ(ಶೇ.6), ಪ್ರ.ವರ್ಗ-ಸಿ(ಶೇ.5) ಒಳಮೀಸಲಾತಿ/ವರ್ಗೀಕರಣ ಅನ್ವಯಿಸುತ್ತದೆ)

## 7. ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:

1. 2025-26ನೇ ಸಾಲಿನಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ. ದಾಖಲೆ ಪರಿಶೀಲನೆ ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಅಂಕಪಟ್ಟಿ ಹೊಂದಿರಬೇಕು.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. 09 ರಿಂದ 13 ವಯೋಮಾನದವರಾಗಿರಬೇಕು.

## 8. ಪ್ರವೇಶ ಪರೀಕ್ಷೆಗೆ ವಸತಿ ಶಾಲೆಗಳ ಮೂಲಕ ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಸ್ವಂತ ತಾಲ್ಲೂಕು/ಜಿಲ್ಲೆಯಲ್ಲಿರುವ ವಸತಿ ಶಾಲೆಗಳ ಆಯ್ಕೆಗೆ ಆದ್ಯತೆ ನಮೂದಿಸುವ ವಿಧಾನ:

2026-27ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳ ಪೋಷಕರು ಈ ಕೆಳಕಂಡ ದಾಖಲಾತಿಗಳೊಂದಿಗೆ ಹತ್ತಿರದ ಯಾವುದಾದರೊಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ವಸತಿ ಶಾಲೆ/ಕಾಲೇಜುಗಳನ್ನು ಸಂಪರ್ಕಿಸಲು ಸೂಚಿಸಿದೆ. ಅಭ್ಯರ್ಥಿಯ ಮಾಹಿತಿಗಳಾದ ಹೆಸರು, ಜನ್ಮ ದಿನಾಂಕ, ಸ್ವಂತ ತಾಲ್ಲೂಕು ಮತ್ತು ಜಿಲ್ಲೆ ಹಾಗೂ ಇನ್ನಿತರೆ ಮಾಹಿತಿಗಳನ್ನು Student Achievement Tracking System (SATS) ತಂತ್ರಾಂಶದಿಂದ SATS ಸಂಖ್ಯೆಯನ್ನು ನಮೂದಿಸಿ ಪಡೆಯಲಾಗುವುದು.

ಈ ಕೆಳಕಂಡ ದಾಖಲೆಗಳನ್ನು ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಹತ್ತಿರದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ವಸತಿ ಶಾಲೆ/ಕಾಲೇಜಿಗೆ ಕಡ್ಡಾಯವಾಗಿ ತೆಗೆದುಕೊಂಡು ಹೋಗಬೇಕು.

1. Student Achievement Tracking System (SATS) ಸಂಖ್ಯೆ.
2. ಇತ್ತೀಚಿನ ಭಾವಚಿತ್ರ.
3. ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ, ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರ.

4. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು ಅಗತ್ಯವಾದ ಆಧಾರ್ ಕಾರ್ಡ್/ರೇಷನ್ ಕಾರ್ಡ್/ಸ್ಥಳೀಯ ಪ್ರಮಾಣ ಪತ್ರ.
5. ವಿಶೇಷ ಪ್ರವರ್ಗಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು.

**ಅರ್ಜಿ ಸಲ್ಲಿಸುವ ವಿವರಗಳು:**

ಅರ್ಜಿ ಭರ್ತಿಮಾಡುವಾಗ ಅಭ್ಯರ್ಥಿಯ ವಿವರಗಳಾದ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಸ್ವಂತ ಜಿಲ್ಲೆ ಮತ್ತು ತಾಲ್ಲೂಕು ಹಾಗೂ ಇನ್ನಿತರೆ ಮಾಹಿತಿಗಳನ್ನು Student Achievement Tracking System (SATS) ತಂತ್ರಾಂಶದಿಂದ SATS ಸಂಖ್ಯೆಯನ್ನು ನಮೂದಿಸಿ ಪಡೆಯಲಾಗುವುದು. ಅಭ್ಯರ್ಥಿಯ SATS ಸಂಖ್ಯೆಯನ್ನು ನಮೂದಿಸಿದಾಗ ಮೇಲಿನ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ನೋಡಬಹುದು. ಯಾವುದಾದರೂ ಮಾಹಿತಿಯಲ್ಲಿ ದೋಷವಿದ್ದರೇ ಸಂಬಂದಪಟ್ಟ ಶಾಲೆಯ ಮುಖ್ಯೋಪಾಧ್ಯಯರನ್ನು ಸಂಪರ್ಕಿಸಿ ಮಾಹಿತಿಯನ್ನು ಸರಿಪಡಿಸಿಕೊಂಡು ಅನಂತರ ಅರ್ಜಿ ಸಲ್ಲಿಸುವುದು.

**ಗಮನಿಸಿ:** ಸೀಟು ಹಂಚಿಕೆಯು ಅಭ್ಯರ್ಥಿಯ ಲಿಂಗ, ಜಾತಿ ಮತ್ತು ಆದಾಯದ ಆಧಾರದ ಹಾಗೂ ಇತರ ಮಾಹಿತಿಯ ಮೇಲೆ ಅವಲಂಬಿತವಾಗಿರುವುದರಿಂದ SATS ನಲ್ಲಿರುವ ಅಭ್ಯರ್ಥಿಯ ಎಲ್ಲಾ ಮಾಹಿತಿಗಳನ್ನು ತಪ್ಪದೇ ಪರಿಶೀಲಿಸಿಕೊಳ್ಳತಕ್ಕದ್ದು. ಅಗತ್ಯವಿದ್ದಲ್ಲಿ ಸದರಿ ಶಾಲೆಯಲ್ಲಿ ಮಾಹಿತಿಯನ್ನು ಸರಿಪಡಿಸತಕ್ಕದ್ದು.

1. ಅಭ್ಯರ್ಥಿಯು ತನ್ನ ಮೀಸಲಾತಿಯಡಿಯಲ್ಲಿ ಸೀಟು ಪಡೆಯಲು ಅರ್ಹತೆಗೊಳ್ಳಲು, ತಾನು ಯಾವ ಮೀಸಲಾತಿ ಅಡಿಯಲ್ಲಿ ಅರ್ಹನಿರುವನೋ ಅಂದರೆ, ಪರಿಶಿಷ್ಟ ಜಾತಿ (ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್ಎಲ್ಪಿ 2024 ಬೆಂಗಳೂರು, ದಿನಾಂಕ: 25.08.2025 ರ ಆದೇಶದಂತೆ ಪರಿಶಿಷ್ಟ ಜಾತಿಯ ಪ್ರ.ವರ್ಗ–ಎ(ಶೇ.6), ಪ್ರ.ವರ್ಗ–ಬಿ(ಶೇ.6), ಪ್ರ.ವರ್ಗ–ಸಿ(ಶೇ.5) ಒಳಮೀಸಲಾತಿ/ವರ್ಗೀಕರಣ ಅನ್ವಯಿಸುತ್ತದೆ) ಅಥವಾ ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ-1 ಅಥವಾ ಇತರೆ ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ RD ಸಂಖ್ಯೆಯನ್ನೊಳಗೊಂಡ ನಿಗದಿತ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿಯನ್ನು ಪಡೆದು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು ವಿಶೇಷ ವರ್ಗಕ್ಕೆ ಸೇರಿದ ಅಭ್ಯರ್ಥಿ ಆಗಿದ್ದಲ್ಲಿ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿರತಕ್ಕದ್ದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ತನ್ನ ಪೋಷಕರ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು.
4. ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಸ್ಥಾನಗಳು, ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ.25 ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡಲಾಗುವುದು. ಅಭ್ಯರ್ಥಿಯು ತನ್ನ ಸ್ವಂತ ತಾಲ್ಲೂಕಿನ ಎಲ್ಲಾ ವಸತಿ ಶಾಲೆಗಳಿಗೆ ಪ್ರವೇಶ ಪಡೆಯಲು ಮೀಸಲಾತಿಗನುಗುಣವಾಗಿ ಅರ್ಹನಾಗಿರುತ್ತಾನೆ. ಸೀಟು ಹಂಚಿಕೆಯು ಜಿಲ್ಲಾ ಹಂತದಲ್ಲಿ ಆನ್-ಲೈನ್ ಮುಖಾಂತರ ನಡೆಸುವುದರಿಂದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ತನ್ನ ಸ್ವಂತ ತಾಲ್ಲೂಕಿನ ಯಾವ ವಸತಿ ಶಾಲೆಗಳಲ್ಲಿ ಪ್ರವೇಶ ಬಯಸುತ್ತಾರೋ ಅಂತಹ ವಸತಿ ಶಾಲೆಗಳಿಗೆ ಆದ್ಯತೆ ಅನುಸಾರ ತನ್ನ ಇಚ್ಛೆ / ಆಯ್ಕೆಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
5. ಅಭ್ಯರ್ಥಿಯು ವಸತಿ ಶಾಲೆಯ ಪ್ರವೇಶಕ್ಕಾಗಿ ಶಾಲೆಯ ಆದ್ಯತೆಗಳನ್ನು ನೀಡುವ ಸಲುವಾಗಿ ಅರ್ಜಿ ಸಲ್ಲಿಸುವ ಶಾಲೆಯಿಂದ "**ಅಭ್ಯರ್ಥಿಯ ವಿವರಗಳು ಮತ್ತು ಶಾಲೆಗಳ ಆಧ್ಯತೆಯ ವಿವರಗಳನ್ನೊಳಗೊಂಡ ಘೋಷಣಾ ಪತ್ರ"ದ** ವಿವರವನ್ನು ಸಲ್ಲಿಸುವ ಪ್ರತಿಯನ್ನು ಪಡೆದು, ಆದ್ಯತೆಗಳನ್ನು ಬರೆದು ಅಭ್ಯರ್ಥಿಯ ಹಾಗೂ ಪೋಷಕರ ಸಹಿಯೊಂದಿಗೆ ವಸತಿ ಶಾಲೆಯ ಮುಖ್ಯಸ್ಥರಿಗೆ ನೀಡಬೇಕು.
6. ಅರ್ಜಿಯನ್ನು ವಸತಿ ಶಾಲೆಯಲ್ಲಿ ಸಲ್ಲಿಸಿದ ನಂತರ ಅದೇ ಶಾಲೆಯಿಂದ ಸ್ವೀಕೃತಿಯನ್ನು ಅಥವಾ ಅರ್ಜಿಯ ಪ್ರತಿಯನ್ನು ಪಡೆದು, ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತದವರೆವಿಗೂ ತನ್ನ ಬಳಿ ಇರಿಸಿಕೊಳ್ಳತಕ್ಕದ್ದು.

**ಸೂಚನೆ:** ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ/ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಹತ್ತಿರದ ವಸತಿ ಶಾಲೆ/ ಕಾಲೇಜುಗಳನ್ನು ಸಂಪರ್ಕಿಸುವುದು.

## 9. ಪ್ರವೇಶ ಪರೀಕ್ಷೆ ವಿಧಾನ

2026-27ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿರ್ವಹಿಸಲಿದ್ದು, ಪರೀಕ್ಷೆಯ ವೇಳಾಪಟ್ಟಿ ಈ ಕೆಳಕಂಡಂತಿದೆ.

| ದಿನಾಂಕ | ದಿನ | ಸಮಯ | ಒಟ್ಟು ಅಂಕಗಳು |
|---|---|---|---|
| 01.03.2026 | ಭಾನುವಾರ | ಬೆಳಗ್ಗೆ 11.00 ರಿಂದ<br>ಮಧ್ಯಾಹ್ನ 1.00 ವರೆಗೆ | 100 |

ಪರೀಕ್ಷೆಯನ್ನು ರಾಜ್ಯ ಮಟ್ಟದಲ್ಲಿ ಏಕಕಾಲಕ್ಕೆ ನಡೆಸಲಾಗುವುದು, ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ನಮೂದಿಸಿದ ತಾಲ್ಲೂಕಿನ / ಜಿಲ್ಲೆಯ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ. ಸಾಧ್ಯವಾದಷ್ಟು ತಾಲ್ಲೂಕುವಾರು ಪರೀಕ್ಷಾ ಕೇಂದ್ರಗಳನ್ನು ತಾಲ್ಲೂಕುವಾರು ಸ್ವೀಕರಿಸಲಾದ ಅರ್ಜಿಗಳಿಗೆ ಅನುಗುಣವಾಗಿ ಗುರುತಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರವನ್ನು (Hall Ticket) ತಾವು ಅರ್ಜಿ ಸಲ್ಲಿಸಿದ ವಸತಿ ಶಾಲೆಯ ಮುಖಾಂತರ ಪಡೆದು, ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡು ನಿಗದಿತ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸೂಚಿಸಿದೆ.

## 10. ಲಿಖಿತ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ:

### 10.1. ಪಠ್ಯಕ್ರಮ:

1. 6ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು (ನೇರ ಪ್ರವೇಶಾತಿ ಕಲ್ಪಿಸಿರುವ ವರ್ಗಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಕಡ್ಡಾಯವಾಗಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು.

2. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ 100 ಅಂಕದ ಬಹು ಆಯ್ಕೆ ಮಾದರಿಯಲ್ಲಿರುತ್ತದೆ.

| ವಿಷಯ | ಒಟ್ಟು ಪ್ರಶ್ನೆಗಳ ಸಂಖ್ಯೆ | ವಿಷಯವಾರು ಅಂಕಗಳು |
|---|---|---|
| ಕನ್ನಡ | 20 | 20 |
| ಇಂಗ್ಲೀಷ್ | 20 | 20 |
| ಗಣಿತ | 20 | 20 |
| ಸಾಮಾನ್ಯ ವಿಜ್ಞಾನ | 20 | 20 |
| ಸಮಾಜ ವಿಜ್ಞಾನ | 20 | 20 |
| **ಒಟ್ಟು** | **100** | **100** |

3. 100 ಅಂಕದ 100 ಪ್ರಶ್ನೆಗಳಿಗೆ ಉತ್ತರಿಸಲು 120 ನಿಮಿಷದ ಸಮಯಾವಕಾಶ ಇರುತ್ತದೆ.
4. ವಸತಿ ಶಾಲೆಯ ಸೀಟು ಹಂಚಿಕೆಗಾಗಿ, ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕ, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ವಸತಿ ಶಾಲೆಗಳ ಆದ್ಯತಾ ಕ್ರಮವನ್ನು ಪರಿಗಣಿಸಲಾಗುವುದು.
5. ಪ್ರಶ್ನೆ ಪತ್ರಿಕೆಯು ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಯಲ್ಲಿರುತ್ತದೆ.
6. ಶೇ. 90% ರಷ್ಟು ಪ್ರಶ್ನೆಗಳು 4 ಮತ್ತು 5ನೇ ತರಗತಿಯ ಪಠ್ಯಾಧಾರಿತವಾಗಿರುತ್ತದೆ.
7. ಮಾದರಿ ಪ್ರಶ್ನೆ ಪತ್ರಿಕೆಯ ಪ್ರತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.gov.in ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೆಬ್‌ಸೈಟ್ https://kreis.karnataka.gov.in ನಲ್ಲಿ ಪ್ರಕಟಿಸಲಾಗುವುದು.

**10.2. ಕಾಲಾವಧಿ, ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರದ ಹಾಳೆಗಳು:**

ಪ್ರತಿಯೊಂದು ಪ್ರಶ್ನೆಪತ್ರಿಕೆಯೂ ಬಹು ಆಯ್ಕೆಯ ಪ್ರಶ್ನೆಗಳ (ವಸ್ತುನಿಷ್ಠ) ಸ್ವರೂಪದ್ದಾಗಿರುತ್ತದೆ. ಪ್ರಶ್ನೆ ಪತ್ರಿಕೆಯು ಬೇರೆ ಬೇರೆ ಆವೃತ್ತಿಗಳಲ್ಲಿ ಇರುತ್ತವೆ ಮತ್ತು ಪ್ರತಿಯೊಂದು ಪ್ರಶ್ನೆಯು ನಾಲ್ಕು ಬೇರೆ ಬೇರೆ ಆಯ್ಕೆಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಪ್ರಶ್ನೆಗೆ ಒಂದು ಅಂಕವನ್ನು ನಿಗದಿಪಡಿಸಲಾಗಿರುತ್ತದೆ. ತಪ್ಪು/ಸರಿಯಲ್ಲದ ಉತ್ತರಗಳಿಗೆ ಯಾವುದೇ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ. ಆದರೆ, ಒಂದೇ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಗುರುತು ಹಾಕಿದ್ದಲ್ಲಿ, ಅಂತಹ ಉತ್ತರಕ್ಕೆ ಯಾವುದೇ ಅಂಕವನ್ನು ನೀಡುವುದಿಲ್ಲ. ಪ್ರಶ್ನೆಪತ್ರಿಕೆಯ ಆವೃತ್ತಿಯ ಸಂಕೇತವನ್ನು ಪ್ರಶ್ನೆ ಪತ್ರಿಕೆಯ ಮುಖಪುಟದ ಮೇಲೆ ದಪ್ಪನಾಗಿ ಮುದ್ರಿಸಲಾಗಿರುತ್ತದೆ.

**10.3. ಉತ್ತರದ ಹಾಳೆಗಳಾಗಿ ಆಪ್ಟಿಕಲ್ ಮಾರ್ಕ್ ರೀಡರ್ (OMR) ಹಾಳೆಗಳ ಬಳಕೆ:**

ವಿದ್ಯಾರ್ಥಿಗಳು ಉತ್ತರಗಳನ್ನು ಗುರುತು ಹಾಕುವುದಕ್ಕಾಗಿ ಉಪಯೋಗಿಸಲಾಗುವ ಆಪ್ಟಿಕಲ್ ಮಾಕ್ ರೀಡರ್ (OMR) ಹಾಳೆಗಳ ಮಾದರಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.gov.in ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೆಬ್‌ಸೈಟ್ https://kreis.karnataka.gov.in ನಲ್ಲಿ ಪ್ರಕಟಿಸಲಾಗುವುದು. ಉತ್ತರ ಪತ್ರಿಕೆಯ ಪಡಿಯಚ್ಚು ಪ್ರತಿ ಇರುವಂತೆ ಉತ್ತರ ಪತ್ರಿಕೆಯನ್ನು ರೂಪಿಸಬೇಕಾದ ಅಗತ್ಯವಿದ್ದುದರಿಂದ, ಒಂದೇ ಬದಿಯಲ್ಲಿ ಎಲ್ಲಾ ಮಾಹಿತಿ ಇರುವಂತೆ ಮತ್ತು ಉತ್ತರಗಳನ್ನು ಸಹ ಅದೇ ಬದಿಯಲ್ಲಿ ಗುರುತು ಮಾಡುವಂತೆ OMR ಹಾಳೆಯನ್ನು ವಿನ್ಯಾಸಗೊಳಿಸಲಾಗಿದೆ.

ಈ ಹಾಳೆಯ ಮೇಲ್ಭಾಗವನ್ನು ವಿದ್ಯಾರ್ಥಿಯ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಖ್ಯೆ ಮತ್ತು ಕ್ರಮ ಸಂಖ್ಯೆಯನ್ನು ತುಂಬುವ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಕೆಳಭಾಗವನ್ನು, ಉತ್ತರಗಳನ್ನು ಗುರುತು ಹಾಕುವುದಕ್ಕೆ, ಕೊಠಡಿ ಮೇಲ್ವಿ ಚಾರಕರು ಮತ್ತು ವಿದ್ಯಾರ್ಥಿಗಳು ತಮ್ಮ ಸಹಿ ಹಾಕುವುದಕ್ಕೆ ರೂಪಿಸಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಸ್ಥಳದಲ್ಲಿ ವಿವರವನ್ನು ಮುಂಚಿತವಾಗಿಯೇ ಮುದ್ರಿಸಲಾಗಿರುತ್ತದೆ. ಪ್ರತಿಯೊಂದು ಬಾಬ್ತಿಗೆ ಸಂಬಂಧಿಸಿದಂತೆ ಇರುವ ಚೌಕಾಕಾರದ ಖಾಲಿ ಮನೆಗಳನ್ನು ವಿದ್ಯಾರ್ಥಿಯು ದೊಡ್ಡ ಅಕ್ಷರಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ತುಂಬಬೇಕು. ಅಕ್ಷರಗಳು ಅಥವಾ ಸಂಖ್ಯೆಗಳಿಗೆ

ಸಂಬಂಧಿಸಿದಂತೆ ಇರುವ ವೃತ್ತಗಳನ್ನು, ಕೇವಲ ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರವೇ ಸಂಪೂರ್ಣವಾಗಿ ತುಂಬಬೇಕು.

### 10.4 . ಒಎಂಆರ್ ಉತ್ತರದ ಹಾಳೆಯ ಮಾದರಿ ಪ್ರತಿ:

OMR ಉತ್ತರದ ಹಾಳೆಯ ಒಂದು ಮಾದರಿ ಪ್ರತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್ ಸೈಟ್ : http://kea.kar.gov.in ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೆಬ್‌ಸೈಟ್ : https://kreis.karnataka.gov.in ನಲ್ಲಿ ಪ್ರಕಟಿಸಲಾಗುವುದು. ಅದನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆದುಕೊಳ್ಳುವುದು. OMR ಮಾದರಿ ಪ್ರತಿಯ ನಾಲ್ಕೈದು ಜೆರಾಕ್ಸ್ ಪ್ರತಿಗಳನ್ನು ಮಾಡಿಕೊಂಡು, ಮನೆಯಲ್ಲಿ ಅವುಗಳ ಮೇಲೆ ಉತ್ತರ ತುಂಬುವ ಅಭ್ಯಾಸ ಮಾಡಿ. ವಿದ್ಯಾರ್ಥಿಗಳು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಅಗತ್ಯವಿರುವ ಬಾಬ್ತುಗಳನ್ನು ತುಂಬುವುದಕ್ಕೆ ಮತ್ತು ಗುರುತು ಮಾಡುವುದಕ್ಕೆ ಸಂಬಂಧಿಸಿದಂತೆ ಬಳಸುವ ಮೂಲಕ ಅಭ್ಯಾಸ ಮಾಡಬಹುದು. ಹೀಗೆ ಮಾಡುವುದರಿಂದ ನೀವು, ಪರೀಕ್ಷೆಯನ್ನು ನಿಜವಾಗಿ ಬರೆಯುವ ಸಮಯದಲ್ಲಿ, ಮೂಲ OMR ಉತ್ತರದ ಹಾಳೆಯಲ್ಲಿ ಹೇಗೆ ಸರಿಯಾದ ರೀತಿಯಲ್ಲಿ ವಿವರಗಳನ್ನು ತುಂಬ ಬೇಕಿರುವುದೋ ಅದೇ ರೀತಿಯಲ್ಲಿಯೇ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆ ಆವೃತ್ತಿ ಸಂಕೇತ, ಮೊದಲಾದ ವಿವರಗಳನ್ನು ಬರೆಯುವ ಮತ್ತು ತುಂಬುವ ವಿಷಯದಲ್ಲಿ ಹೆಚ್ಚಿನ ನಿಖರತೆ ಪಡೆದುಕೊಳ್ಳುವಿರಿ.

OMR ಉತ್ತರದ ಹಾಳೆಯ ಮೇಲೆ ವಿವರಗಳನ್ನು ತುಂಬುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಹೆಚ್ಚಿನ ವಿವರಗಳನ್ನು ಈ ಮುಂದೆ ನೀಡಲಾಗಿದೆ:

(i) OMR ಉತ್ತರದ ಹಾಳೆಯು, ಎರಡು ಹಾಳೆಗಳನ್ನು ಒಳಗೊಂಡಿರುತ್ತದೆ.

(ii) OMR ಉತ್ತರದ ಮೇಲ್ಭಾಗದ ಹಾಳೆಯನ್ನು ಸರಿಯಾದ ಉತ್ತರಗಳನ್ನು ಗುರುತು ಹಾಕುವುದಕ್ಕೆ ಮತ್ತು ಆನಂತರ ಅದನ್ನು ಸ್ಕ್ಯಾನ್ ಹಾಗೂ ಮೌಲ್ಯಮಾಪನ ಮಾಡುವುದಕ್ಕೆ ಬಳಸಲಾಗುವುದು. ಕೆಳಭಾಗದ ಹಾಳೆಯನ್ನು ಪರೀಕ್ಷೆಯ ಅವಧಿ ಮುಗಿದ ನಂತರ ವಿದ್ಯಾರ್ಥಿಗೆ ಕೊಡಲಾಗುವುದು. ಕೆಳಭಾಗದ ಹಾಳೆಗೆ ಒಂದು ವಿಶೇಷ ಬಗೆಯ ರಾಸಾಯನಿಕ ವಸ್ತುವನ್ನು ಬಳಿಯಲಾಗಿದ್ದು, ಅದು ಕಾರ್ಬನ್ ಪೇಪರ್ ರೀತಿ ಕೆಲಸ ಮಾಡುತ್ತದೆ. ವಿದ್ಯಾರ್ಥಿಯು ಮೇಲ್ಭಾಗದ ಹಾಳೆಯ ಮೇಲೆ ವೃತ್ತಗಳನ್ನು ತುಂಬಿದಾಗ, ಕೆಳಭಾಗದ ಹಾಳೆಯ ಮೇಲೆ ಬೀಳುವ ಒತ್ತಡವು ಸಹಜವಾಗಿಯೇ ಅದರ ಮೇಲೆ ಮೇಲ್ಭಾಗದ ಹಾಳೆಯ ಪಡಿಯಚ್ಚನ್ನು ಸೃಷ್ಟಿಸುತ್ತದೆ.

### 10.5 ಬಾಲ್ ಪಾಯಿಂಟ್ ಪೆನ್ನನ್ನೇ ಏಕೆ ಬಳಸಬೇಕು?

ವಿದ್ಯಾರ್ಥಿಗಳು OMR ಉತ್ತರದ ಹಾಳೆಯ ಪಡಿಯಚ್ಚು ಅಥವಾ ಯಥಾಪ್ರತಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ನೀಡಲಾಗಿದೆ ಮತ್ತು OMR ಉತ್ತರ ಪತ್ರಿಕೆಯು ಎರಡು ಹಾಳೆಗಳ ಒಂದು ಸೆಟ್ ಆಗಿರುತ್ತದೆ ಎನ್ನುವುದು ನಿಮ್ಮ ನೆನಪಿನಲ್ಲಿರಲಿ. ಮೇಲಿನ ಹಾಳೆಯಲ್ಲಿರುವ ವೃತ್ತದ ಮೇಲೆ ನೀವು ಷೇಡ್ ಮಾಡಿದಾಗ ಅದರಿಂದ ಬೀಳುವ ಒತ್ತಡದಿಂದಾಗಿ, ಕೆಳಗಿನ ಹಾಳೆಯಲ್ಲಿರುವ ಅದೇ ವೃತ್ತದಲ್ಲಿ ಕಪ್ಪು ಬಣ್ಣದ ಗುರುತು ಮೂಡುತ್ತದೆ. ನಿಬ್ ಪೆನ್ನನ್ನು ಬಳಸಿದರೆ, ಮೇಲಿನ ಹಾಳೆಯ ಮೇಲೆ ಬೀಳುವ ಒತ್ತಡದ ಪ್ರಮಾಣವು ಕೆಳಗಿನ ಹಾಳೆಯ ಮೇಲಿರುವ ರಾಸಾಯನಿಕವನ್ನು ಪಟು(ಆಕ್ಟಿವ್) ಗೊಳಿಸುವುದಕ್ಕೆ ಸಾಕಾಗುವುದಿಲ್ಲ. ಇದಕ್ಕೆ ಬದಲಾಗಿ ಬಾಲ್‌ಪಾಯಿಂಟ್ ಪೆನ್ ಅನ್ನು ಬಳಸಿದಾಗ ಅದು ಕೆಳಗಿನ ಹಾಳೆಯಲ್ಲಿರುವ ರಾಸಾಯನಿಕವನ್ನು ಕಪ್ಪು ಬಣ್ಣದ ಗುರುತಾಗಿ ಬದಲಾಯಿಸುವುದಕ್ಕೆ ಬೇಕಿರುವಷ್ಟು ಒತ್ತಡವನ್ನು ಹಾಕುತ್ತದೆ. ಈ ಕಾರಣಕ್ಕಾಗಿಯೇ ನೀವು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಅನ್ನು ಮಾತ್ರ ಬಳಸಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿದೆ.

## 10.6 OMR (Optical Mark Reader) ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಬರೆಯುವಾಗ/ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು:

a) **ಆರಂಭದ 10 ನಿಮಿಷಗಳು:** ಪರೀಕ್ಷೆಯ ಅವಧಿಯ ಮೊದಲ ಹತ್ತು ನಿಮಿಷಗಳನ್ನು OMR ಉತ್ತರ ಹಾಳೆಗಳ ಮೇಲ್ಭಾಗದಲ್ಲಿ ಕೊಟ್ಟಿರುವ ಅಂಕಣಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಕೇತ ಮತ್ತು ಕ್ರಮ ಸಂಖ್ಯೆಯಂತಹ ವಿವರಗಳನ್ನು ಬರೆಯುವುದಕ್ಕಾಗಿ/ಷೇಡ್ ಮಾಡುವುದಕ್ಕಾಗಿ ನೀಡಲಾಗುವುದು. ತಮ್ಮ ಸರಿಯಾದ ನೊಂದಣಿ ಸಂಖ್ಯೆ ಮತ್ತು ವರ್ಷನ್ ಕೋಡ್‌ಅನ್ನು ಬರೆಯದಿರುವ/ಷೇಡ್ ಮಾಡದಿರುವ ವಿದ್ಯಾರ್ಥಿಗಳ OMR ಉತ್ತರ ಹಾಳೆಗಳನ್ನು ಸ್ಕ್ಯಾನ್ ಮಾಡಲಾಗುವುದಿಲ್ಲ ಹಾಗೂ ಅಂಥಹ ವಿದ್ಯಾರ್ಥಿಗಳಿಗೆ ಯಾವುದೇ ರ್‍ಯಾಂಕ್ ಅನ್ನು ನೀಡಲಾಗುವುದಿಲ್ಲ. ಹೆಸರು, ನೊಂದಣಿ ಸಂಖ್ಯೆ ಮತ್ತು ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್‌ಗೆ ಸಂಬಂಧಪಟ್ಟ ನಮೂದುಗಳು ಅತ್ಯಂತ ನಿರ್ಣಾಯಕವಾದವುಗಳಾಗಿವೆ. ಆದ್ದರಿಂದ OMR ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಈ ಮೂರು ಬಾಬ್ತುಗಳನ್ನು ಬರೆಯುವಾಗ ಮತ್ತು ಷೇಡ್ ಮಾಡುವಾಗ ವಿದ್ಯಾರ್ಥಿಗಳು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕೆಂದು ಸಲಹೆ ನೀಡಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಯ ಅವಧಿಯ ಆರಂಭದಲ್ಲಿ ನೀಡಲಾಗುವ ಆಪ್ಟಿಕಲ್ ಮಾರ್ಕ್ ರೀಡರ್(OMR) ಉತ್ತರ ಹಾಳೆಯ ಮೇಲೆ ಸರಿಯಾದ ಉತ್ತರಗಳನ್ನು ಗುರುತು ಮಾಡಬೇಕಿರುತ್ತದೆ. ಪ್ರತಿ ಪ್ರಶ್ನೆಯು ಒಂದೇ ಒಂದು ಸರಿಯಾದ ಉತ್ತರವನ್ನು ಮಾತ್ರ ಹೊಂದಿರುತ್ತದೆ. ವಿದ್ಯಾರ್ಥಿಗಳು **ನೀಲಿ** ಅಥವಾ **ಕಪ್ಪು** ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರ ಬಳಸಿ ಪ್ರಶ್ನೆ ಸಂಖ್ಯೆಗೆ ಸಂಬಂಧಿಸಿದಂತೆ ನೀಡಿರುವ ವೃತ್ತಗಳಲ್ಲಿ ಒಂದು ವೃತ್ತವನ್ನು ಮಾತ್ರ ಪೂರ್ಣವಾಗಿ ಷೇಡ್ ಮಾಡುವ ಮೂಲಕ ಸರಿಯಾದ ಉತ್ತರವನ್ನು ಗುರುತು ಮಾಡಬೇಕು.

ಒಂದು ವೇಳೆ OMR ನಲ್ಲಿ ಅಭ್ಯರ್ಥಿಯ ಮಾಹಿತಿಯು Pre-printed ಆಗಿದ್ದರೆ, ವಿದ್ಯಾರ್ಥಿಗಳು ಮಾಹಿತಿಯನ್ನು ತುಂಬುವ ಅವಶ್ಯಕತೆ ಇರುವುದಿಲ್ಲ.

b) **ನಂತರದ 120 ನಿಮಿಷಗಳು:**

**OMR ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು :**

ಆರಂಭದ ಹತ್ತು ನಿಮಿಷಗಳ ನಂತರ OMR ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವುದಕ್ಕಾಗಿ, ವಿದ್ಯಾರ್ಥಿಗಳಿಗೆ 120 ನಿಮಿಷಗಳನ್ನು ನೀಡಲಾಗುವುದು. ಕೆಳಭಾಗದಲ್ಲಿ 100 ಪ್ರಶ್ನೆಗಳಿಗೆ ಸರಿಹೊಂದುವಂತೆ 100 ಸಾಲುಗಳಿರುತ್ತವೆ. ಪ್ರಶ್ನೆ ಪತ್ರಿಕೆಯಲ್ಲಿರುವ ಉತ್ತರದ ನಾಲ್ಕು ಆಯ್ಕೆಗಳಿಗೆ ಸರಿಹೊಂದುವಂತೆ ಪ್ರತಿ ಪ್ರಶ್ನೆ ಸಂಖ್ಯೆಯ ಎದುರಿಗೆ ನಾಲ್ಕು ವೃತ್ತಗಳನ್ನು ನೀಡಲಾಗಿರುತ್ತದೆ. ವಿದ್ಯಾರ್ಥಿಗಳು ಅವುಗಳಲ್ಲಿ ಸರಿಯಾದ ಉತ್ತರಕ್ಕೆ ಸರಿ ಹೊಂದುವಂಥ ಒಂದೇ ಒಂದು ವೃತ್ತವನ್ನು ಮಾತ್ರ ಷೇಡ್ ಮಾಡಬೇಕಿರುತ್ತದೆ.

**ಕಪ್ಪು ಮತ್ತು ನೀಲಿ ಶಾಯಿಯ ಷೇಡ್‌ಗಳಿಗೆ ಸ್ಕ್ಯಾನರ್ ಎಷ್ಟರಮಟ್ಟಿಗೆ ಸೂಕ್ಷ್ಮ ಸಂವೇದಿಯಾಗಿರುತ್ತದೆ ಎಂದರೆ OMR ಉತ್ತರ ಹಾಳೆಯ ವೃತ್ತದೊಳಗೆ ಅಪ್ಪಿತಪ್ಪಿ ಮಾಡಿರುವ ಸಣ್ಣಪುಟ್ಟ ಶಾಯಿ ಗುರುತನ್ನು ಅಥವಾ ನಿರುದ್ದೇಶವಾಗಿ ಆಗಿರುವ ಶಾಯಿಯ ಚುಕ್ಕಿಯನ್ನು ಸಹ, ಸ್ಕ್ಯಾನಿಂಗ್ ಸಮಯದಲ್ಲಿ ತುಂಬಿರುವ/ ಷೇಡ್ ಮಾಡಿರುವ ಗುರುತು ಎಂದೇ ಪರಿಗಣಿಸುತ್ತದೆ. ಇದರಿಂದಾಗಿ ವಿದ್ಯಾರ್ಥಿಯು ಅಂಕಗಳನ್ನು ಕಳೆದುಕೊಳ್ಳಬಹುದು.** ಆದ್ದರಿಂದ, ದಯವಿಟ್ಟು OMR ಉತ್ತರ ಹಾಳೆಯ ಮೇಲೆ ಪೆನ್ನಿನಿಂದ ಯಾವುದೇ ವಿಧವಾದ ಅನಗತ್ಯ ಗುರುತುಗಳನ್ನು ಮಾಡಬೇಡಿ. ಸ್ಕ್ಯಾನರ್ ಮತ್ತು ಕಂಪ್ಯೂಟರ್ ಒಟ್ಟಾಗಿ ನೀಡಿದ ಅಂಕಗಳೇ ಅಂತಿಮವಾಗುವುದರಿಂದ ವೃತ್ತದಲ್ಲಿ ಆದ ಶಾಯಿ ಗುರುತನ್ನು ಅಳಿಸುವುದಕ್ಕಾಗಿ ಅಥವಾ ಗಣನೆಗೆ ತೆಗೆದುಕೊಳ್ಳದಿರುವುದಕ್ಕಾಗಿ ಮಾಡುವಂಥ ಮನವಿಯನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಕೆಳಭಾಗದಲ್ಲಿರುವ ವೃತ್ತಗಳನ್ನು ಷೇಡ್ ಮಾಡುವಾಗ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಲಾಗಿದೆ.


### c) ಪರೀಕ್ಷೆಯ ಅವಧಿಗೆ ಸಂಬಂಧಿ ಪತ್ರಿಕೆಯ ಮುಕ್ತಾಯ:

ವಿದ್ಯಾರ್ಥಿಗಳು, ಪರೀಕ್ಷೆಯ ಅವಧಿಯು ಮುಗಿದ ನಂತರ ಕೊಠಡಿ ಮೇಲ್ವಿಚಾರಕರು ರಂಧ್ರಗಳನ್ನು ಹೊಂದಿರುವ (perforations) ಉತ್ತರದ ಹಾಳೆಯ ಸೆಟ್ಟಿನ ಮೇಲಿನ ಹಾಳೆ ಂದ ಕೆಳಗಿನ ಹಾಳೆಯನ್ನು ಬೇರ್ಪಡಿಸಿ, ಪಡಿಯಚ್ಚಿನ ಕೆಳಗಿನ ಹಾಳೆಯನ್ನು ವಿದ್ಯಾರ್ಥಿಗಳಿಗೆ ನೀಡುವರು. ಅದನ್ನು ವಿದ್ಯಾರ್ಥಿಗಳು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು. ಮೇಲಿನ ಹಾಳೆಯನ್ನು ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರಿಗೆ ನೀಡುವ ಸಲುವಾಗಿ ಕೊಠಡಿ ಮೇಲ್ವಿಚಾರಕರು ತಮ್ಮ ಬಳಿ ಇಟ್ಟುಕೊಳ್ಳುವರು. ಇದನ್ನು ಆನಂತರ ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರು ಪ್ರಾಧಿಕಾರಕ್ಕೆ ನೀಡುವರು.

ವಿದ್ಯಾರ್ಥಿಗಳು, `ಪ್ರವೇಶ ಪರೀಕ್ಷೆ-2026' ರ OMR ಉತ್ತರದ ಹಾಳೆಯ ಪಡಿಯಚ್ಚು ಪ್ರತಿಗಳನ್ನು ಜೋಪಾನವಾಗಿಟ್ಟುಕೊಳ್ಳಬೇಕು.

### ಸರಿಯಾಗಿ ಆಲೋಚಿಸಿದ ನಂತರ ಉತ್ತರವನ್ನು ಗುರುತು ಮಾಡಿ

ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು OMR ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ನಿಂದ ಸಂಪೂರ್ಣ ತುಂಬುವುದು.




ವೃತ್ತವನ್ನು ಒಮ್ಮೆ ಗುರುತು ಮಾಡಿದ ಮೇಲೆ, ಅದನ್ನು ಅಳಿಸುವುದಕ್ಕಾಗಲೀ ಅಥವಾ ತೆಗೆದು ಹಾಕುವುದಕ್ಕಾಗಲೀ ಯಾವುದೇ ರೀತಿಯಲ್ಲೂ ಸಾಧ್ಯವಿರುವುದಿಲ್ಲ. ಆದ್ದರಿಂದ ಸರಿಯಾದ ಉತ್ತರ ಕುರಿತು ನೀವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ. ನೀವು ಒಮ್ಮೆ ಗುರುತು ಮಾಡಿರುವುದನ್ನು ಕಾಣದಂತೆ ಮಾಡುವುದಕ್ಕಾಗಿ ಮಾರ್ಕರ್, ವೈಟ್ ಫ್ಲೂಯಿಡ್ ಅಥವಾ ಇತರ ಯಾವುದೇ ಸಾಧನವನ್ನು ಬಳಸುವುದಕ್ಕೆ ಮೇಲ್ವಿಚಾರಕರು ನಿಮಗೆ ಅನುಮತಿಸುವುದಿಲ್ಲ. ಅಲ್ಲದೆ ನಿಮಗೆ ಮತ್ತೊಂದು OMR ಹಾಳೆಯನ್ನು ಕೊಡುವುದಿಲ್ಲ. ವೃತ್ತದ ಮೇಲೆ ಮಾಡಿದ ಗುರುತನ್ನು ಅಳಿಸುವ ನಿಮ್ಮ ಪ್ರಯತ್ನದಲ್ಲಿ ನೀವು ಹಾಳೆಯನ್ನು ಹಾಳು ಮಾಡಿಕೊಂಡರೆ, ನಿಮ್ಮ ಅವಕಾಶಗಳನ್ನು ನೀವೇ ಹಾಳು ಮಾಡಿಕೊಳ್ಳುವಿರಿ. ಒಂದು ಸಾಲಿನಲ್ಲಿ ಇರುವ ವೃತ್ತಗಳಲ್ಲಿ ಎರಡು ವೃತ್ತಗಳಿಗೆ ಗುರುತು ಮಾಡಿದ್ದು, ಅವೆರಡರಲ್ಲಿ ಯಾವುದೇ ಒಂದು ವೃತ್ತವನ್ನು ಭಾಗಶಃ ಅಳಿಸಿದ್ದರೂ ಸಹ, ಅದನ್ನು ಸ್ಕ್ಯಾನರ್ ಬಹು ಉತ್ತರಗಳೆಂದೇ ಪರಿಗಣಿಸುತ್ತದೆ. ಆದ್ದರಿಂದ ಶಾಯಿಯಿಂದ ವೃತ್ತಕ್ಕೆ ಗುರುತು ಮಾಡುವ ಮುನ್ನ ಸರಿಯಾಗಿ ಆಲೋಚಿಸಿ ಗುರುತು ಮಾಡುವ ಸರಿಯಾದ ವಿಧಾನದಲ್ಲಿ ತೋರಿಸಿರುವಂತೆ ಪ್ರತಿ ಪ್ರಶ್ನೆಗೆ ಒಂದೇ ಒಂದು ವೃತ್ತವನ್ನು ಮಾತ್ರ ಗುರುತು ಮಾಡಿ.

### 11. ಸಮಾನ ಅಂಕಗಳು ಬಂದಾಗ ಮೆರಿಟ್ ನಿರ್ಣಯ:

ಒಂದು ವೇಳೆ ಎರಡು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಒಂದೇ ಆಗಿದ್ದಲ್ಲಿ ಆ ಅಭ್ಯರ್ಥಿಗಳ ವಯಸ್ಸಿನ ಆಧಾರದ ಮೇಲೆ ಅವರ ನಡುವಿನ ಮೆರಿಟ್‌ನ್ನು ನಿರ್ಧರಿಸಲಾಗುವುದು. ಅಂದರೆ ಇಂತಹ ಅಭ್ಯರ್ಥಿಗಳ ಪೈಕಿ ವಯಸ್ಸಿನಲ್ಲಿ ಕಿರಿಯನಾದ ಅಭ್ಯರ್ಥಿಗಿಂತ ಹಿರಿಯನಾದ ಅಭ್ಯರ್ಥಿಯನ್ನು ಮೊದಲು ಪರಿಗಣಿಸಲಾಗುವುದು. ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ಅಭ್ಯರ್ಥಿಯ ಹೆಸರಿನ ವರ್ಣಾಕ್ಷರದ ಕ್ರಮನುಸಾರ ಮೆರಿಟ್ ನಿರ್ಧರಿಸಲಾಗುವುದು, ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ತಂದೆಯ ಹೆಸರಿನ ವರ್ಣಾಕ್ಷರದ ಕ್ರಮಾನುಸಾರ ಮೆರಿಟ್ ಪಟ್ಟಿ ನಿರ್ಧರಿಸಲಾಗುವುದು.

## 12. ಫಲಿತಾಂಶ ಪ್ರಕಟಣೆ:

ಪ್ರವೇಶ ಪರೀಕ್ಷೆ ಮುಗಿದ ನಂತರ ತಾತ್ಕಾಲಿಕ ಕೀ ಉತ್ತರಗಳನ್ನು ನಿಗದಿಪಡಿಸಿದ ದಿನಾಂಕದಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.gov.in ನಲ್ಲಿ ಪ್ರಕಟಿಸಲಾಗುವುದು. ಹೀಗೆ ಪ್ರಕಟಿಸಲಾದ ಯಾವುದೇ ತಾತ್ಕಾಲಿಕ ಕೀ ಉತ್ತರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು / ಪೋಷಕರಲ್ಲಿ ಯಾವುದೇ ಆಕ್ಷೇಪಗಳಿದ್ದ ಪಕ್ಷದಲ್ಲಿ, ಅವುಗಳಿಗೆ ಸಂಬಂಧಿಸಿದ ಎಲ್ಲಾ ಪೂರಕ ದಾಖಲೆಗಳ / ಸಮರ್ಥನೆಗಳ ಜೊತೆಯಲ್ಲಿ, ಅಂಥ ಆಕ್ಷೇಪಣೆಗಳನ್ನು ಮುಂದೆ ಪ್ರಕಟಿಸಲಾಗುವ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕಿರುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸ್ವೀಕರಿಸಿದ ಇಂಥ ಆಕ್ಷೇಪಣೆಗಳನ್ನು ವಿಷಯ ತಜ್ಞರ ಸಮಿತಿಯ ಮುಂದೆ ಮಂಡಿಸಲಾಗುವುದು. ಸರಿಯಾದ ಕೀ ಉತ್ತರವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಈ ಸಮಿತಿ ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ. ವಿಷಯ ತಜ್ಞರ ಸಮಿತಿ ಅನುಮೋದಿಸಿದ ಕೀ ಉತ್ತರವನ್ನು, ಮೆರಿಟ್ ಕ್ರಮವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಮೌಲ್ಯ ಮಾಪನದ ಸಮಯದಲ್ಲಿ ಅನ್ವಯಿಸಲಾಗುವುದು.

**ಸೂಚನೆ:** ಮೌಲ್ಯಮಾಪನ ಮಾಡುವ ಮತ್ತು ಅಂಕ ನೀಡುವ ಪದ್ಧತಿಯು ಸಂಪೂರ್ಣವಾಗಿ ದೋಷರಹಿತವಾಗಿರುವುದರಿಂದ OMR ಉತ್ತರ ಹಾಳೆಗಳ ಮರು-ಎಣಿಕೆಗೆ ಅಥವಾ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ಮನವಿಗಳನ್ನು ಸ್ವೀಕರಿಸುವುದಿಲ್ಲ.

## 13. ಸೀಟು ಹಂಚಿಕೆ ಮತ್ತು ದಾಖಲಾತಿ ವಿಧಾನ :

ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಜಿಲ್ಲಾ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಜಿಲ್ಲಾ ಮಟ್ಟದಲ್ಲಿ ಪರಿಶಿಷ್ಟ ಜಾತಿ (ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 ಬೆಂಗಳೂರು, ದಿನಾಂಕ: 25.08.2025 ರ ಆದೇಶದಂತೆ ಪರಿಶಿಷ್ಟ ಜಾತಿಯ ಪ್ರ.ವರ್ಗ–ಎ(ಶೇ.6), ಪ್ರ.ವರ್ಗ–ಬಿ(ಶೇ.6), ಪ್ರ.ವರ್ಗ–ಸಿ(ಶೇ.5) ಒಳಮೀಸಲಾತಿ/ವರ್ಗೀಕರಣ ಅನ್ವಯಿಸುತ್ತದೆ) , ಪರಿಶಿಷ್ಟ ವರ್ಗ , ಪ್ರವರ್ಗ-1, 2ಎ, 2ಬಿ, 3ಎ, 3ಬಿ ಹಾಗೂ ಸಾಮಾನ್ಯ ವರ್ಗ, ಬಾಲಕ, ಬಾಲಕಿಯರು, ಸ್ಥಳೀಯ/ಸ್ಥಳೀಯೇತರ ಮೀಸಲಾತಿಗನುಗುಣವಾಗಿ ಆನ್-ಲೈನ್ ಸೀಟು ಹಂಚಿಕೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತದೆ.

- ✓ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು(ಮೆರಿಟ್).
- ✓ ಅಭ್ಯರ್ಥಿಯು ಸೇರ ಬಯಸುವ ವಸತಿ ಶಾಲೆಗಳ ಶಾಲಾವಾರು ಆದ್ಯತೆ.
- ✓ ಅಭ್ಯರ್ಥಿಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ.

ಮೇಲ್ಕಂಡ ಅಂಶಗಳ ಆಧಾರದ ಮೇಲೆ SEAT MATRIX ಸಿದ್ಧಪಡಿಸಿ ಗಣಕೀಕೃತ ಸ್ವಯಂ ಆಯ್ಕೆ (Computerized auto selection) ಮೂಲಕ ಪಾರದರ್ಶಕವಾಗಿ ಈ ಕೆಳಕಂಡಂತೆ ಸೀಟು ಹಂಚಿಕೆ ಮಾಡಲಾಗುತ್ತಿದೆ.

1) ಅಭ್ಯರ್ಥಿಯು ತಮ್ಮ ಸ್ವಂತ ಜಿಲ್ಲೆಯ ವಸತಿ ಶಾಲೆಗಳಿಗೆ ಮಾತ್ರ ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2) ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ತಾವು ಸೇರ ಬಯಸಲು ನಮೂದಿಸಿರುವ ವಸತಿ ಶಾಲೆಗಳ ಆದ್ಯತಾ ಕ್ರಮ.
3) ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ವಿದ್ಯಾರ್ಥಿ ಬಯಸುವ ವಸತಿ ಶಾಲೆಯನ್ನು Computerised Auto Selection ಮಾಡಲಾಗುವುದು.
4) ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ, ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಸ್ಥಾನವನ್ನು ಹಂಚಿಕೆಮಾಡಿ, ಉಳಿದ ಶೇ.25 ಸ್ಥಾನಗಳಿಗೆ ನಿಯಮಾನುಸಾರ ಅದೇ ಜಿಲ್ಲೆಯ ಬೇರೆ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮಾತ್ರ ಸೀಟು ಹಂಚಿಕೆ ಮಾಡಲಾಗುವುದು.

5) ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಮೊದಲನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೋಢೀಕರಿಸಿ, ಮೊದಲನೇ ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ, 2ನೇ ಸುತ್ತಿನ ಜಿಲ್ಲಾ ಮಟ್ಟದ ಆನ್-ಲೈನ್ ಸೀಟು ಹಂಚಿಕೆಯನ್ನು ಮಾಡುವುದು. 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆ ಮುಕ್ತಾಯದ ನಂತರ ಅವಶ್ಯವಿದ್ದಲ್ಲಿ 3ನೇ ಸುತ್ತಿನ ಕೌನ್ಸಿಲಿಂಗ್ ನಡೆಸಲಾಗುವುದು. ಇನ್ನು ಹೆಚ್ಚಿನ ಸುತ್ತಿನ ಕೌನ್ಸಿಲಿಂಗ್ ಅಗತ್ಯವಿದೆ ಎಂಬ ಅಂಶ ಗಮನಕ್ಕೆ ಬಂದರೆ ಕೌನ್ಸಿಲಿಂಗ್ ನಡೆಸಲಾಗುವುದು.
6) ಕಾಲಕಾಲಕ್ಕೆ ಈ ನಿಟ್ಟಿನಲ್ಲಿ ಸರ್ಕಾರ ಹೊರಡಿಸುವ ಆದೇಶಗಳಂತೆ ಸೂಕ್ತ ಮಾರ್ಪಾಟುಗಳೊಂದಿಗೆ ಸೀಟು ಹಂಚಿಕೆ ಮಾಡಲಾಗುವುದು.
7) ಮೇಲ್ಕಂಡಂತೆ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಖಾಲಿ ಉಳಿಯುವ ಸ್ಥಾನಗಳಿಗೆ ಈ ಕೆಳಕಂಡ ಕ್ರಮ ಅನುಸರಿಸಲಾಗುವುದು.

## 14. ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ:

1) ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ವರ್ಗ, ಪ್ರ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
2) ಪರಿಶಿಷ್ಟ ವರ್ಗದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ಜಾತಿ, ಪ್ರ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
3) ಪ್ರ.ವರ್ಗ-1ರಲ್ಲಿ ಖಾಲಿ ಉಳಿದರೆ 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
4) 2ಎ ವರ್ಗದಲ್ಲಿ ಖಾಲಿ ಉಳಿದರೆ ಕ್ರಮವಾಗಿ ಪ್ರ.ವರ್ಗ-1, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
5) 2ಬಿ ಯಲ್ಲಿ ಖಾಲಿ ಉಳಿದರೆ, ಪ್ರ.ವರ್ಗ-1, 2ಎ, 3ಎ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
6) 3ಎ ಯಲ್ಲಿ ಖಾಲಿ ಉಳಿದರೆ, ಕ್ರಮವಾಗಿ ಪ್ರ.ವರ್ಗ-1, 2ಎ, 2ಬಿ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
7) 3ಬಿ ಯಲ್ಲಿ ಖಾಲಿ ಉಳಿದರೆ, ಪ್ರ.ವರ್ಗ-1, 2ಎ, 2ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
8) ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಯರಿಗೆ ಅವಕಾಶ ಕಲ್ಪಿಸುವುದು.
9) ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ ಕಲ್ಪಿಸುವುದು.
10) ಸ್ಥಳೀಯ/ಸ್ಥಳೀಯೇತರ ಅಭ್ಯರ್ಥಿಗಳಿಗೆ 75:25 ರ ಅನುಪಾತವನ್ನು ಕಾಪಾಡುವುದು.

# PART – B - ವಿಶೇಷ ವರ್ಗಗಳಿಗೆ ನೇರ ಪ್ರವೇಶಾತಿ

## 1. ಪೀಠಿಕೆ:–

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವತಿಯಿಂದ 847 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಡಾ|| ಬಿ ಆರ್ ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ಕವಿ ರನ್ನ, ಗಾಂಧಿತತ್ವ, ಶ್ರೀ ನಾರಾಯಣ ಗುರು, ಪ್ರತಿಭಾನ್ವಿತ ಬಾಲಕಿಯರ, ಶ್ರೀಮತಿ ರಮಾಬಾಯಿ ಅಂಬೇಡ್ಕರ್, ಶ್ರೀಮತಿ ಸಾವಿತ್ರಿ ಬಾಯಿ ಪುಲೆ, ಮಾಹಾತ್ಮ ಜ್ಯೋತಿ ಬಾ ಪುಲೆ, ಸಂತ ಸೇವಾಲಾಲ್ ಮತ್ತು ಡಿ.ದೇವರಾಜ ಅರಸು ಮಹನೀಯರ ಹೆಸರಿನ ವಸತಿ ಶಾಲೆಗಳನ್ನು ರಾಜ್ಯಾದ್ಯಂತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ 2026-27ನೇ ಶೈಕ್ಷಣಿಕ ಸಾಲಿಗೆ **ಒಟ್ಟು 43,070 ಸೀಟುಗಳಲ್ಲಿ ಶೇ. 50 ರಷ್ಟು ಅಂದರೆ 21,535 ಸೀಟುಗಳನ್ನು ವಿಶೇಷ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೇ, ಮೀಸಲಾತಿಯನ್ವಯ ನೇರ ದಾಖಲಾತಿ ಮುಖಾಂತರ ವಿದ್ಯಾರ್ಥಿಗಳನ್ನು ಭರ್ತಿ ಮಾಡುವ ವಿಧಾನ ಮತ್ತು ಲಿಂಕ್ ಕುರಿತು ಪ್ರತ್ಯೇಕವಾಗಿ ಸೂಚನೆಗಳನ್ನು ನೀಡಲಾಗುವುದು.**

## 2. ವಿಶೇಷ ವರ್ಗದ ಅಭ್ಯರ್ಥಿಗಳಿಗೆ ಲಭ್ಯವಿರುವ ಸ್ಥಾನಗಳ ಸಂಖ್ಯೆ:

| ಕ್ರ. ಸಂ. | ವಸತಿ ಶಾಲೆಯ ಮಾದರಿ | ಶಾಲೆಗಳ ಸಂಖ್ಯೆ | 6ನೇ ತರಗತಿಗೆ ಪ್ರತಿ ಶಾಲೆಗೆ ಮಂಜೂರಾತಿ ಸಂಖ್ಯೆ | ಲಭ್ಯವಿರುವ ಒಟ್ಟು ಸ್ಥಾನಗಳು | ನೇರ ಪ್ರವೇಶಾತಿಗೆ ಲಭ್ಯವಿರುವ ಸ್ಥಾನಗಳು |
|---|---|---|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ | 364 | 50 | 18350 | **9175** |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 159 | 50 | 7990 | **3995** |
| 3 | ಡಾ|| ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ | 165 | 50 | 8270 | **4135** |
| 4 | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ | 98 | 50 | 4900 | **2450** |
| 5 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಸತಿ ಶಾಲೆ | 1 | 50 | 50 | **25** |
| 6 | ಅಲೆಮಾರಿ ವಸತಿ ಶಾಲೆ | 3 | 50 | 150 | **75** |
| 7 | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 1 | 50 | 50 | **25** |
| 8 | ಕವಿರನ್ನ ವಸತಿ ಶಾಲೆ | 1 | 50 | 50 | **25** |
| 9 | ಗಾಂಧಿತತ್ವ ವಸತಿ ಶಾಲೆ | 2 | 60 | 120 | **60** |
| 10 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ | 24 | 50 | 1200 | **600** |
| 11 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ದೇವನಹಳ್ಳಿ ವಸತಿ ಶಾಲೆಗೆ 50 ಸೀಟುಗಳು ಮಾತ್ರ ಮಂಜೂರಾಗಿದೆ.) | 16 | 80 | 1250 | **625** |
| 12 | ಶ್ರೀ ನಾರಾಯಣ ಗುರು ವಸತಿ ಶಾಲೆ | 4 | 50 | 200 | **100** |
| 13 | ಶ್ರೀ ಡಿ ದೇವರಾಜು ಅರಸು ವಸತಿ ಶಾಲೆ | 4 | 60 | 240 | **120** |
| 14 | ಶ್ರೀಮತಿ ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆ | 1 | 50 | 50 | **25** |
| 15 | ಶ್ರೀಮತಿ ಸಾವಿತ್ರಿ ಬಾಯಿ ಪುಲೆ ವಸತಿ ಶಾಲೆ | 1 | 50 | 50 | **25** |
| 16 | ಮಾಹಾತ್ಮ ಜ್ಯೋತಿ ಬಾ ಪುಲೆ ವಸತಿ ಶಾಲೆ | 2 | 50 | 100 | **50** |
| 17 | ಸಂತ ಸೇವಾಲಾಲ ವಸತಿ ಶಾಲೆ | 1 | 50 | 50 | **25** |
| **ಒಟ್ಟು** | | **847** | | **43070** | **21,535** |

**ವಿಶೇಷ ವರ್ಗಗಳ ವಿವರಗಳು ಕೆಳಕಂಡಂತಿದ್ದು, ಶೇಕಡವಾರು ಮತ್ತು ವರ್ಗವಾರು ಮೀಸಲಾತಿಯನ್ನು ನಂತರ ಪ್ರಕಟಿಸಲಾಗುವುದು.**

### 3. ವಿಶೇಷ ವರ್ಗಗಳ ಅರ್ಥ:

**A. ಸಫಾಯಿ ಕರ್ಮಚಾರಿ/ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಚಿಂದಿ ಆಯುವವರು/ ಸ್ಮಶಾನ ಕಾರ್ಮಿಕರ ಮಕ್ಕಳು :**

**ಅ) ಸಫಾಯಿ ಕರ್ಮಚಾರಿ ಮಕ್ಕಳು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಂಬಂಧಪಟ್ಟ ಗ್ರಾಮೀಣ, ನಗರ ಮತ್ತು ಸ್ಥಳೀಯ ಸಂಸ್ಥೆಗಳ ಸಕ್‌ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಸಫಾಯಿ ಕರ್ಮಚಾರಿ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಆ) ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮಕ್ಕಳು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಂಬಂಧಪಟ್ಟ ಗ್ರಾಮೀಣ, ನಗರ ಮತ್ತು ಸ್ಥಳೀಯ ಸಂಸ್ಥೆಗಳ ಸಕ್ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಇ) ಚಿಂದಿ ಆಯುವವರ ಮಕ್ಕಳು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಂಬಂಧಪಟ್ಟ ಗ್ರಾಮೀಣ, ನಗರ ಮತ್ತು ಸ್ಥಳೀಯ ಸಂಸ್ಥೆಗಳ ಸಕ್ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಚಿಂದಿ ಆಯುವವರ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಈ) ಸ್ಮಶಾನ ಕಾರ್ಮಿಕರ ಮಕ್ಕಳು** : ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಂಬಂಧಪಟ್ಟ ಗ್ರಾಮೀಣ, ನಗರ ಮತ್ತು ಸ್ಥಳೀಯ ಸಂಸ್ಥೆಗಳ ಸಕ್ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಸ್ಮಶಾನ ಕಾರ್ಮಿಕರ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**B. ಬಾಲ ಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು/ ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು**

**ಅ) ಬಾಲ ಕಾರ್ಮಿಕರು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಕಾರ್ಮಿಕ ಇಲಾಖೆಯಿಂದ ನಿಗದಿತ ನಮೂನೆಯಲ್ಲಿ ಬಾಲ ಕಾರ್ಮಿಕರ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಆ) ಜೀತ ವಿಮುಕ್ತ ಕಾರ್ಮಿಕರ ಮಕ್ಕಳು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಕಾರ್ಮಿಕ ಇಲಾಖೆಯಿಂದ ನಿಗದಿತ ನಮೂನೆಯಲ್ಲಿ ಜೀತ ವಿಮುಕ್ತ ಕಾರ್ಮಿಕರ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಇ) ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು**: ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ನಿಗದಿತ ನಮೂನೆಯಲ್ಲಿ ಗುರುತಿಸಿರುವ ಮಾಜಿ ದೇವದಾಸಿಯರ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಈ) ಸಂಚಾರಿ ಕುರಿಗಾಹಿಗಳು :** ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸ್ಥಳೀಯ ಸರ್ಕಾರಿ ಪಶು ವೈಧ್ಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ ರವರಿಂದ ದೃಢೀಕರಿಸಿಕೊಂಡು ಪೋಷಕರು ಸಲ್ಲಿಸಿದ ಪ್ರಮಾಣ ಪತ್ರವನ್ನು ಪರಿಗಣಿಸುವುದು.

**C. 25% ಕ್ಕಿಂತ ಹೆಚ್ಚಿನ ಅಂಗಲವಿಕಲತೆ ಹೊಂದಿರುವ ಮಕ್ಕಳು/ ಹೆಚ್.ಐ.ವಿ ಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು.**

**ಅ) 25% ಕ್ಕಿಂತ ಹೆಚ್ಚಿನ ಅಂಗಲವಿಕಲತೆ ಹೊಂದಿರುವ ಮಕ್ಕಳು**: ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿರುವಂತೆ ಶೇ.25ಕ್ಕಿಂತ ಕಡಿಮೆಯಿಲ್ಲದಂತೆ ಈ ಮುಂದಿನ ಯಾವುದೇ ಒಂದು ದೋಷದಿಂದ ಬಳಲುತ್ತಿರುವ ವಿದ್ಯಾರ್ಥಿ.

| | | | |
|---|---|---|---|
| 1 | ಮಂದ ದೃಷ್ಟಿ | 3 | ದುರ್ಬಲ ಶ್ರವಣಶಕ್ತಿ |
| 2 | ವಾಸಿಯಾಗಿರುವ ಕುಷ್ಠರೋಗ | 4 | ಚಲನಶಕ್ತಿ ಇಲ್ಲದಿರುವುದು |

**ಆ) ಹೆಚ್.ಐ.ವಿ ಗೆ ತುತ್ತಾದ ಪೋಷಕರ ಮಕ್ಕಳು:** ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ವೈದ್ಯಕೀಯ ಪ್ರಾಧಿಕಾರವು ನಿಗದಿತ ನಮೂನೆಯಲ್ಲಿ ಹೆಚ್.ಐ.ವಿ ಗೆ ತುತ್ತಾದ ಪೋಷಕರಿಗೆ ನೀಡುವ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

**ಇ) ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು:** ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಪೋಷಕರು ಮರಣ ಹೊಂದಿರುವ ಮರಣ ಪ್ರಮಾಣ ಪತ್ರ ಅಥವಾ ವಿಚ್ಛೇದನಾ ಹೊಂದಿರುವ ಕುರಿತು ದಾಖಲೆಗಳನ್ನು ಪಡೆದು ಸಲ್ಲಿಸತಕ್ಕದ್ದು.

**D. ಗುರುತಿಸಿರುವ ಅಲೆಮಾರಿ/ಅರೆ-ಅಲೆಮಾರಿ/ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ/ ಸೈನಿಕರು ಮತ್ತು ಮಾಜಿ ಸೈನಿಕರ ಮಕ್ಕಳು / ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು**.

**ಅ) ಗುರುತಿಸಿರುವ ಅಲೆಮಾರಿ/ಅರೆ-ಅಲೆಮಾರಿ /ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ ಮಕ್ಕಳು:** ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನಿಗಧಿಪಡಿಸಲಾದ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆಯುವುದು. ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಗುರುತಿಸಲಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿನ ಸೂಕ್ಷ್ಮ / ಅತಿ ಸೂಕ್ಷ್ಮ, ಅಲೆಮಾರಿ/ ಅರೆ-ಅಲೆಮಾರಿ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಅಲೆಮಾರಿ/ಅರೆ-ಅಲೆಮಾರಿ ವಿದ್ಯಾರ್ಥಿ ಎಂದು ಪರಿಗಣಿಸುವುದು.

ಅಲೆಮಾರಿ/ಅರೆ-ಅಲೆಮಾರಿಯವರಿಗೆ ಪ್ರತ್ಯೇಕ ಜಾತಿ ಪ್ರಮಾಣ ನೀಡುವುದಿಲ್ಲ. ಆದರೆ ಸರ್ಕಾರದ ಆದೇಶಗಳಾದ 1)ಸಂಖ್ಯೆ: ಪಿಹೆಚ್‌ಎಸ್ 262 ಎಸ್‌ಇಡಬ್ಲ್ಯೂ 65, ದಿನಾಂಕ: 01/02/1966, 2) ಸಂಖ್ಯೆ: SWD 225 BCA 2000, Banglore, Dated 30/03/2002, 3) ಸಂಖ್ಯೆ: ಸಕಇ 10 ಎಸ್‌ಎಲ್ ಪಿ 2015, ದಿನಾಂಕ: 12/01/2016, 4) ಸಂಖ್ಯೆ: ಸಕಇ 06 ಎಸ್‌ಎಡಿ 2018 ಬೆಂಗಳೂರು, ದಿನಾಂಕ: 04/07/2018 ಇದಕ್ಕೆ ಸಂಬಂಧಿಸಿದಂತೆ ಮೇಲ್ಕಂಡಂತೆ ಸರ್ಕಾರದಿಂದ ಹೊರಡಿಸಿರುವ ಆದೇಶಗಳನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳನ್ನು ಅಲೆಮಾರಿ /ಅರೆ-ಅಲೆಮಾರಿ ಜಾತಿಗಳೆಂದು ಗುರುತಿಸಲಾಗಿದ್ದು, ಸದರಿ ಜನಾಂಗಗಳ ವಿದ್ಯಾರ್ಥಿಗಳನ್ನು ಅಲೆಮಾರಿ/ಅರೆ-ಅಲೆಮಾರಿ ಎಂದು ಪರಿಗಣಿಸುವುದು.

**ಆ) ಸೈನಿಕರು ಮತ್ತು ಮಾಜಿ ಸೈನಿಕರ ಮಕ್ಕಳು**: ಭದ್ರತಾ ದಳ, ಸೇನಾ ಪಡೆಗಳಿಂದ ನಿಗದಿಪಡಿಸಲ್ಪಟ್ಟ ಪ್ರಾಧಿಕಾರಿಯಿಂದ 'ಸೈನಿಕ' ಪ್ರಮಾಣ ಪತ್ರ ಮತ್ತು 'ಮಾಜಿ ಸೈನಿಕ' ಪ್ರಮಾಣ ಪತ್ರವನ್ನು ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆಯಿಂದ ಪಡೆದು ಸಲ್ಲಿಸತಕ್ಕದ್ದು.

**ಇ) ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು:** ಸರ್ಕಾರ ನಿಗಧಿಪಡಿಸಿರುವಂತೆ ನಿಯಮಾನುಸಾರ ಸಕ್ಷಮ ಪುನರ್ ವಸತಿ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**E. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು:** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಶ್ರಮ ವಸತಿ ಶಾಲೆಯಲ್ಲಿ ಕನಿಷ್ಠ ಒಂದು ವರ್ಷ ಅಧ್ಯಯನ ಮಾಡಿ ವಾರ್ಷಿಕ ಪರೀಕ್ಷೆ ಬರೆದು, ಉತ್ತೀರ್ಣನಾದ ವಿದ್ಯಾರ್ಥಿಯನ್ನು ಮಾತ್ರ "ಆಶ್ರಮಶಾಲೆ ವಿದ್ಯಾರ್ಥಿ" ಎಂದು ಪರಿಗಣಿಸುವುದು. ಸಂಬಂಧಪಟ್ಟ ವಸತಿ ಶಾಲೆಯ ಮುಖ್ಯೋಪಾಧ್ಯಾಯರಿಂದ ಅನುಬಂಧ-1 ರಲ್ಲಿ ನೀಡಲಾದ 'ವ್ಯಾಸಂಗ ಪ್ರಮಾಣ' ಪತ್ರವನ್ನು ಪಡೆದು ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸುವುದು.

4. **ಸ್ಥಳೀಯ ಅಭ್ಯರ್ಥಿ :** ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75, ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ.25 ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡಲಾಗುವುದು. 50 ಸಂಖ್ಯಾಬಲದ ವಸತಿ ಶಾಲೆಗೆ 38 ಸ್ಥಾನಗಳನ್ನು, 60 ಸಂಖ್ಯಾಬಲದ ವಸತಿ ಶಾಲೆಗೆ 45 ಸ್ಥಾನಗಳು ಹಾಗೂ 80 ಸಂಖ್ಯಾಬಲದ ವಸತಿ ಶಾಲೆಗೆ 60 ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗೆ ಮೀಸಲಿಡುವುದು. ಒಂದು ತಾಲ್ಲೂಕಿಗೆ ನಿಗದಿಪಡಿಸಿದ ಸಂಖ್ಯೆಯ "ಸ್ಥಳೀಯ ಅಭ್ಯರ್ಥಿ"ಗಳು ದೊರೆಯದಿದ್ದರೆ, ಜಿಲ್ಲಾಮಟ್ಟದ ಕೌನ್ಸಿಲಿಂಗ್ ಮೂಲಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವುದು. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು SATS ನಲ್ಲಿ ಲಭ್ಯವಿರುವ ಸ್ಥಳೀಯ ಅಭ್ಯರ್ಥಿ ಮಾಹಿತಿ ಅಥವಾ ಆಧಾರ್ ಕಾರ್ಡ್ ಅಥವಾ ಜಾತಿ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಅಥವಾ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು.

## 5. ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

| ವರ್ಗ | ಜಾತಿ | ಆದಾಯ |
|---|---|---|
| ಹಿಂದುಳಿದ ವರ್ಗ | ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ❖ ಹಿಂದುಳಿದ ವರ್ಗಕ್ಕೆ ಸೇರಿದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1,00,000/- ಮಿತಿಯೊಳಗಿರಬೇಕು.<br>❖ ಪ್ರ.ವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ರೂ.2,50,000/- ಆದಾಯ ಮಿತಿಯೊಳಗಿರಬೇಕು. |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2,50,000/- ಮಿತಿಯೊಳಗಿರತಕ್ಕದ್ದು. |

(ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 ಬೆಂಗಳೂರು, ದಿನಾಂಕ: 25.08.2025 ರ ಆದೇಶದಂತೆ ಪರಿಶಿಷ್ಟ ಜಾತಿಯ ಪ್ರ.ವರ್ಗ-ಎ(ಶೇ.6), ಪ್ರ.ವರ್ಗ-ಬಿ(ಶೇ.6), ಪ್ರ.ವರ್ಗ-ಸಿ(ಶೇ.5) ಒಳಮೀಸಲಾತಿ/ವರ್ಗೀಕರಣ ಅನ್ವಯಿಸುತ್ತದೆ)

## **6. ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:**

1. 2025-26ನೇ ಸಾಲಿನಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ. ದಾಖಲೆ ಪರಿಶೀಲನೆ ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಅಂಕಪಟ್ಟಿ ಹೊಂದಿರಬೇಕು.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. 09 ರಿಂದ 13 ವಯೋಮಾನದವರಾಗಿರಬೇಕು.

**Part A ಮತ್ತು Part B ಗೆ ವಿಶೇಷ ಸೂಚನೆ : ಯಾವುದೇ ಸುತ್ತಿನ ಸೀಟು ಹಂಚಿಕೆಯ ನಂತರ ಒಂದೊಮ್ಮೆ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯು ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸದಿದ್ದರೆ ಅಥವಾ ತಪ್ಪು ಮಾಹಿತಿ ನೀಡಿದರೆ, ಅಂತಹ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತಗೊಳ್ಳುತ್ತದೆ. ನಿಗದಿಪಡಿಸಿದ ದಿನಾಂಕದೊಳಗೆ ದಾಖಲೆ ಪರಿಶೀಲನೆಗೆ ಹಾಜರಾಗಿ ಅಧಿಕೃತ ಪ್ರವೇಶ ಪಡೆಯದ ಹಾಗೂ ಹಾಜರಾಗದ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲಾಗುವುದು. ಒಮ್ಮೆ ಆಯ್ಕೆಗೊಂಡ ಅಭ್ಯರ್ಥಿಯು ಮತ್ತೊಮ್ಮೆ ಆಯ್ಕೆ ಬಯಸಲು ಅಥವಾ ವಸತಿ ಶಾಲೆಯ ಬದಲಾವಣೆ ಕೋರಲು ಅವಕಾಶವಿರುವುದಿಲ್ಲ. (ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 ಬೆಂಗಳೂರು, ದಿನಾಂಕ: 25.08.2025 ರ ಆದೇಶದಂತೆ ಪರಿಶಿಷ್ಟ ಜಾತಿಯ ಪ್ರ.ವರ್ಗ-ಎ(ಶೇ.6), ಪ್ರ.ವರ್ಗ-ಬಿ(ಶೇ.6), ಪ್ರ.ವರ್ಗ-ಸಿ(ಶೇ.5) ರಂತೆ ಒಳಮೀಸಲಾತಿ/ವರ್ಗೀಕರಣ ಅನ್ವಯಿಸುತ್ತದೆ) ಮೇಲ್ಕಂಡಂತೆ ನೀಡಿರುವ ಮಾರ್ಗಸೂಚಿಗಳು ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸುವ/ ಹೊರಡಿಸುವ ಆದೇಶಗಳ ಷರತ್ತಿಗೆ ಒಳಪಟ್ಟಿರುತ್ತದೆ.**

### ವಂಚಕರ ಬಗ್ಗೆ ಎಚ್ಚರದಿಂದಿರಿ

ಕೆಲವು ವ್ಯಕ್ತಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ನಮಗೆ ಚೆನ್ನಾಗಿ ಗೊತ್ತು ಎಂದು ಹೇಳಿಕೊಂಡು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಅಕ್ರಮವಾಗಿ ನಿಮಗೆ ಸೀಟು ದೊರಕಿಸಿಕೊಡುವ ಆಶ್ವಾಸನೆ ನೀಡಬಹುದು. ಆದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸೀಟು ಹಂಚಿಕೆಯಲ್ಲಿ ಯಾವುದೇ ಅಕ್ರಮ ವ್ಯವಹಾರಕ್ಕೆ ಆಸ್ಪದ ನೀಡುವುದಿಲ್ಲ. ಅಂಥ ಯಾರಾದರೂ ವ್ಯಕ್ತಿಗಳು ನಿಮ್ಮ ಗಮನಕ್ಕೆ ಬಂದ ಪಕ್ಷದಲ್ಲಿ ಕೂಡಲೇ ಲಿಖಿತ ರೂಪದಲ್ಲಿಯಾಗಲೀ ಅಥವಾ ಪ್ರಾಧಿಕಾರಕ್ಕೆ ಇ-ಮೇಲ್ ಮಾಡುವ ಮೂಲಕವಾಗಲೀ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡುವುದು. ಸೀಟು ಹಂಚಿಕೆಯು ಸರ್ಕಾರ ನೀಡುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಕಟ್ಟುನಿಟ್ಟಾಗಿ ಆಧರಿಸಿರುತ್ತದೆ. ಹಾಗೆಯೇ ವಿದ್ಯಾರ್ಥಿ/ನಿಯ ಮೆರಿಟ್, ಮೀಸಲಾತಿ ಮತ್ತು ಆತ/ಆಕೆ ನಮೂದಿಸಿರುವ ಇಚ್ಛೆಯನ್ನು ಮಾತ್ರವೇ ಆಧರಿಸಿ ಅವರಿಗೆ ಸೀಟನ್ನು ಹಂಚಿಕೆ ಮಾಡಲಾಗುವುದು. ಆದ್ದರಿಂದ ಸುಳ್ಳು ಆಶ್ವಾಸನೆಗಳನ್ನು ಕೊಡುವ ಯಾರೇ ಅಪರಿಚಿತ ವ್ಯಕ್ತಿಗಳನ್ನು ನಂಬತಕ್ಕದ್ದಲ್ಲ.